ಜನಪದ ವಿಕಾಸ

ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೭ ಮೇ-೨೦೦೭ ಸಂಚಿಕೆ-೧೦



ಹೊಸ ದೃಷ್ಟಿ, ಹೊಸ ಸೃಷ್ಟಿಯ ತೇಜಸ್ವಿ

ತೇಜಸ್ವಿ ಸ್ಮರಣಾಂಜಲಿ ಸಂಚಿಕೆ

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜಸ್ಟ್

ಮೇ-೨೦೦೭
ಸಂಪುಟ-೭
ಸಂಚಿಕೆ-೧೦

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

☎ ೦೮೨೩೬ ೨೯೮೭೫೪
e-mail - janapada@yahoo.com

ಚುಂಬನ

ಹಸಿರ ಗಿರಿಗೆ ಭುವಿಯ ಸಿರಿಗೆ
ಬಾಲ ರವಿಯ ಚುಂಬನ
ಮಕರಂದ ಹೊಂದಿದ ಅಂದ ಚೆಂದದ
ಪುಷ್ಪಗಳಿಗೆ
ಗಾನ ದುಂಬಿಯ ಚುಂಬನ
ಬಳಕುತಿರುವ ಬಳ್ಳಿಗೆ ಏರಿಳಿಯುತಿರುವ
ಅಲೆಗೆ
ತಂಪು ಗಾಳಿಯ ಚುಂಬನ
ಮುಂಜಾವಿನ ಮಡಿಲಿಗೆ ಹಸಿರ ಹುಲ್ಲಿನ
ಒಡಲಿಗೆ
ಹನಿ ಇಬ್ಬನಿಯ ಚುಂಬನ
ಹಾಲುಗಲ್ಲದ ಹಸುಳೆಗೆ ಒಡಸಿ ನಡೆವ
ಕರುವಿಗೆ
ತರುಣಿ ತಾಯಿಯ ಚುಂಬನ
ಕತ್ತಲು ಕವಿದ ಧರೆಗೆ ಕವನ ಹುಟ್ಟದ ಕವಿಗೆ
ಹುಣ್ಣಿಮೆ ಚಂದ್ರನ ಚುಂಬನ!

-ಚಿಕ್ಕೋಬನಹಳ್ಳಿ ಚಾಂದ್ ಬಾಷ.

ಪ್ರಣಾಳಿಕೆ

ಜಗತ್ತಿನ ಎಲ್ಲ ಅರಮನೆಗಳೂ ನೆಲಸಮವಾಗಲಿ
ಬೀದಿಯಲ್ಲೇ ಬೆಳಗು ಕಾಣುವ ಸೂರು ಸಿಗಲಿ
ಬಂಗಾರದ ಸಿಂಹಾಸನ ವಜ್ರದ ಕಿರೀಟ
ಹರಾಜಾಗಲಿ
ಹಸಿದ ಒಡಲುಗಳಿಗೆ ತುತ್ತು ಬೀಳಲಿ
ಕತ್ತಿಗುರಾಣಿಬಾಂಬು ಬಂದೂಕು ಹೊಳೆ
ಮುಳುಗಲಿ
ಬನ್ನಿಯ ಹಸಿರು ತೋರಣಗಟ್ಟಲಿ

-ಎಂ.ಡಿ.ವಕ್ಕುಂದ

ವಿಚಾರ ದೀಪ್ತಿ

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲು ತರುವ ಕೇಂದ್ರ ಸರಕಾರದ ಪ್ರಯತ್ನಕ್ಕೆ ಕೋರ್ಟ್ ತಡೆ ನೀಡಿರುವುದು ಶ್ಲಾಘನೀಯ. ಇದಕ್ಕಾಗಿ ಸುಪ್ರೀಂ ಕೋರ್ಟ್ ನ್ಯಾಯಾಧೀಶರು ಅಭಿನಂದನಾರ್ಹರು. ರಾಜಕಾರಣಿಗಳು ತಮ್ಮ ಸ್ವಾರ್ಥಕ್ಕಾಗಿ ಅಧಿಕಾರಗಳಿಸುವುದಕ್ಕೆ ಮತ ಬ್ಯಾಂಕುಗಳ ಮೇಲೆ ಕಣ್ಣಿಟ್ಟು ಈ ಪ್ರಯತ್ನಮಾಡುತ್ತಿರುವುದಕ್ಕೆ ಪುರಾವೆಗಳೇನೂ ಬೇಕಿಲ್ಲ. ಯಾವ ಜಾತಿ ಜನರ ಮತಗಳು ಹೆಚ್ಚಿವೆಯೋ, ಅಂತಹವರಿಂದ ಸಂಪೂರ್ಣ ಮತ ಪಡೆಯಲು ಸಾಧ್ಯವಿದೆಯೋ ಅಂತಹವರನ್ನು ಈ ಮೀಸಲಿನಡಿಯಲ್ಲಿ ಸೇರಿಸಿಕೊಳ್ಳುತ್ತಿರುವುದನ್ನು ಕಾಣಬಹುದು. ಆದರೆ ಇದರಲ್ಲಿ ಆ ಜನಾಂಗದ ಉದ್ಧಾರವೇನೂ ಆಗುತ್ತಿಲ್ಲ. ಎಲ್ಲೋ ಕೆಲವು ಮಂದಿಗೆ ಅವಕಾಶ ಸಿಗುವಂತೆ ಮಾಡಿ ಇಡಿ ಜನಾಂಗದ ಮತ ಪಡೆದು ಅಧಿಕಾರ ಗಳಿಸುವ ಹುನ್ನಾರು ಇವರದು. ಇವರ ತಂತ್ರಕ್ಕೆ ಇನ್ನೂ ಅವಕಾಶ ನೀಡಿದಲ್ಲಿ ದೇಶದ ಪರಿಸ್ಥಿತಿ ಅಂದರೆ ವಿದೇಶಿ ಸಾಲ, ದೇಶದ ಪ್ರಾಕೃತಿಕ ಸಂಪನ್ಮೂಲಗಳ ಲೂಟಿ ಮುಂದುವರೆದು ದೇಶವು ಅಧೋಗತಿಯತ್ತ ಸಾಗುವುದಕ್ಕೆ ಕಾರಣವಾಗುತ್ತಿದೆ.

ಮೀಸಲು ನೀತಿ ಬಿಟ್ಟು ಬೇರೆ ಉತ್ತಮ ರೀತಿಯಲ್ಲಿ ಅಂತಹ ಜನಾಂಗವನ್ನು ಮುಂದಕ್ಕೆ ತರಬಹುದು. ಅದಕ್ಕಾಗಿ ದೃಢನಿರ್ಧಾರ ಮತ್ತು ಇಚ್ಛಾಶಕ್ತಿಯ ಅಗತ್ಯವಿದೆ. ಇವರ ಪ್ರಕಾರ ಹಿಂದುಳಿದ ಜನರೆಂದು ಯಾರ್ಯಾರನ್ನು ಪಟ್ಟಿ ಮಾಡಿರುತ್ತಾರೆಯೋ ಅವರ ಆ ಹಿಂದುಳಿದಿರುವಿಕೆಗೆ ಯರ್ಯಾರನ್ನು ಮೇಲ್ವರ್ಗದವರೆಂದು ಪಟ್ಟಿ ಮಾಡಿರುತ್ತಾರೆಯೋ ಅವರೇ ಕಾರಣವೆಂದು ದೂಷಿಸುತ್ತಾ ಪರಸ್ಪರ ದ್ವೇಷ ಭಾವನೆ ಮೂಡುವುದಕ್ಕೆ ಕಾರಣವಾಗಿದ್ದಾರೆ. ದೇಶದಲ್ಲಿ ಎಲ್ಲ ವರ್ಗಗಳಲ್ಲೂ ಬಡತನ, ಹಿಂದುಳಿದಿರುವಿಕೆ ಕಂಡುಬರುತ್ತಿದೆ. ಆದ್ದರಿಂದ ಮೀಸಲು ನೀಡುವ ಬದಲು ಆ ಜನಾಂಗದವರಿಗೆ ಉತ್ತಮ ತರಬೇತಿ ನೀಡಬೇಕು. ಇದಕ್ಕೆ ಯಾರ ವಿರೋಧವೂ ಉಂಟಾಗುವುದಿಲ್ಲ. ಬದಲಿಗೆ ಸಹಾಯಹಸ್ತವೂ ಸಿಗುವುದರಲ್ಲಿ ಸಂದೇಹವಿಲ್ಲ. ಈ ರೀತಿ ಮಾಡುವುದನ್ನು ಬಿಟ್ಟು ಮೀಸಲಿನಿಂದಲೇ ಅವಕಾಶ ನೀಡಿ, ಮೀಸಲಿನಿಂದಲೇ ಉದ್ಯೋಗ ನೀಡಿ, ಮೀಸಲಿನ ಆಧಾರದ ಮೇಲೆಯೇ ವೃತ್ತಿಯಲ್ಲಿ ಬಡ್ತಿ ನೀಡುವುದು ಮಾನವ ಹಕ್ಕು ಉಲ್ಲಂಘನೆಯಲ್ಲವೆ? ಸುಪ್ರೀಂ ಕೋರ್ಟ್ ಈ ಎಲ್ಲ ವಿಚಾರಗಳನ್ನು ಕೂಲಂಕುಷ ಪರಿಶೀಲಿಸಬೇಕು.

– ಅನಂತ ಪದ್ಮನಾಭ. ಬಿ.ಜೇ.

ಹೊಸ ದೃಷ್ಟಿ, ಹೊಸ ಸೃಷ್ಟಿಯ ತೇಜಸ್ವಿ

-ಸುರೇಂದ್ರ ಕೌಲಗಿ

ಲೇಖಕ ತೇಜಸ್ವಿಯವರ ಬದುಕು ಹಾಗೂ ಬರವಣಿಗೆಗಳ ಬಗ್ಗೆ ಕೇವಲ ಬೆರಗು ಪಡುವುದನ್ನು ಸಾಕುಮಾಡಿ ಬೇಕಾದ್ದನ್ನು ಮೆಚ್ಚುವ, ವಿಮರ್ಶಿಸಬೇಕಾದ್ದನ್ನು ವಿಮರ್ಶಿಸುವ ತಾಕತ್ತನ್ನು ಕನ್ನಡದ ಬೌದ್ಧಿಕ ಜಗತ್ತು ತೋರಿಸಬೇಕಿದೆ.

-ಪಾರ್ವತೀಶ.

ಕನ್ನಡ ಸಾಹಿತ್ಯ ಧರೆಯ ಮೇಲೆ ಇತ್ತೀಚಿಗಿನ ತಲೆಮಾರಿನ ಸಾಹಿತಿಯಾಗಿ ಬಲವಾದ ಹೆಜ್ಜೆ ಗುರುತನ್ನು ಮೂಡಿಸಿದ ಪೂರ್ಣಚಂದ್ರ ತೇಜಸ್ವಿ ೫-೪-೨೦೦೭ ರಂದು ಕಣ್ಮರೆಯಾದರು. ಅವರ ನಿಧನದ ವಾರ್ತೆಯನ್ನು ಕೇಳಿದ ಪ್ರತಿಯೊಬ್ಬ ಸಾಹಿತ್ಯ ಪ್ರೇಮಿಯು, ನಿಸರ್ಗ ಪ್ರೇಮಿಯು, ಪಕ್ಷಿ ಪ್ರೇಮಿಯು ದುಃಖದಲ್ಲಿ ಮುಳುಗಿದನು. ಅಲ್ಲದೆ, ತನ್ನ ಜೀವನದ ಆತ್ಮೀಯ ಭಾಗವೊಂದನ್ನು ಕಳೆದುಕೊಂಡ ಭಾವನೆಯನ್ನು ಅನುಭವಿಸಿದನು. ತೇಜಸ್ವಿಯವರ ಒಡನಾಟ ಮಾಡಿದವರಿಗೂ,ಅವರ ಸಾಹಿತ್ಯ ಕೃತಿಗಳನ್ನು ಓದಿದವರಿಗೂ ತೇಜಸ್ವಿ ಪ್ರೀತಿಸುತ್ತಿದ್ದ ಪ್ರಕೃತಿಯಂತೆಯೇ ತೇಜಸ್ವಿ ಸಹ ವಿಸ್ಮಯಕಾರಿ ವ್ಯಕ್ತಿತ್ವವುಳ್ಳವರಾಗಿದ್ದರು. ಅವರು ಜೀವನವನ್ನು, ಪ್ರಕೃತಿಯನ್ನು, ಸಾರ್ವಜನಿಕ ಜೀವನದ ಸಮಸ್ಯೆಗಳನ್ನು ಯಾವ ದೃಷ್ಟಿಕೋನದಿಂದ ವಿಶ್ಲೇಷಿಸಬಹುದೆಂಬುದು ಯಾವಾಗಲೂ ಕುತೂಹಲಕಾರಿಯೇ ಆಗಿರುತ್ತಿತ್ತು, ಬೇರೆಲ್ಲರ ದೃಷ್ಟಿಕೋನದಿಂದ ಭಿನ್ನವಾಗಿರುತ್ತಿತ್ತು. ಆದ್ದರಿಂದಲೇ ಸಾರ್ವಜನಿಕ ಸಮಸ್ಯೆ ಕುರಿತು ಅವರು ವ್ಯಕ್ತಪಡಿಸುವ ಅಭಿಪ್ರಾಯ ತಳೆಯುವ ನಿಲುವು ಬುದ್ಧಿಜೀವಿಗಳೆಲ್ಲರ ಚಿಂತನಕ್ಕೆ ಗ್ರಾಸವಾಗುವುದರ ಜೊತೆಗೆ, ಚಿಂತನೆಯ ಬೆಳವಣಿಗೆಗೇ ಹೊಸ ತಿರುವು ಕೊಡುತ್ತಿತ್ತು. ನಾಡಗೀತೆಯ ಸಂದರ್ಭದಲ್ಲಿ ಉಂಟಾದ ವಿವಾದದ ಬಗ್ಗೆ ತೇಜಸ್ವಿ ವ್ಯಕ್ತಪಡಿಸಿದ ಅಭಿಪ್ರಾಯ, ಕನ್ನಡ ತಂತ್ರಾಂಶದ ಸ್ಥಿತಿಗತಿಯ ಬಗ್ಗೆ ಹೇಳಿದ ಅಭಿಪ್ರಾಯ, ತಮ್ಮ ತಂದೆ ಕುವೆಂಪು ತೀರಿಕೊಂಡಾಗ ಅವರ ಅಂತ್ಯಕ್ರಿಯೆಯನ್ನು ಮೈಸೂರು ವಿಶ್ವವಿದ್ಯಾಲಯದ ಆವರಣದಲ್ಲಿ ಮಾಡಬೇಕೆಂದು ಕೆಲವರು ಹಠ ಹಿಡಿದಾಗ ಅವರು ಅದನ್ನು ತಳ್ಳಿ ಹಾಕಿದ ವಿಧಾನ, ಕರ್ನಾಟಕಕ್ಕೆ ಬಹುದೊಡ್ಡ ಹಾಗೂ ಗೌರವದ ಪ್ರಶಸ್ತಿಯೆಂದೆನಿಸಿಕೊಂಡಿರುವ ಪಂಪ ಪ್ರಶಸ್ತಿಯನ್ನು ಎಲ್ಲ ಒತ್ತಡಗಳ ಮಧ್ಯೆಯೂ ತಮ್ಮ ನಿಲುವಿನ ಮೇಲೆ ದೃಢವಾಗಿ ನಿಂತ ರೀತಿ ಹೀಗೆ ಹತ್ತು ಹಲವಾರು ಅವರ ಕೃತಿಗಳು ಮತ್ತು ಮಾತುಗಳು ತೇಜಸ್ವಿಯವರನ್ನು ವಿಸ್ಮಯಕಾರಿ ವ್ಯಕ್ತಿಯನ್ನಾಗಿ ಮಾಡಿವೆ. ಅವರ ವಿಷಯ ವಿಶ್ಲೇಷಣೆಯೇ ಬೇರೆಲ್ಲ ಬುದ್ಧಿ ಜೀವಿಗಳಿಗಿಂತ, ಚಿಂತಕರಿಗಿಂತ ಭಿನ್ನವಾಗಿರುತ್ತಿದುದೇ ಅವರನ್ನು ಜನರು

ಹೆಚ್ಚು ಗೌರವಿಸಲು ಕಾರಣ. ಅವರು ತಮ್ಮ ವಿದ್ಯಾರ್ಥಿ ದೆಸೆಯಕಾಲದಿಂದ ಹಿಡಿದು, ತಮ್ಮ ಜೀವಿತದ ಕೊನೆಯ ಘಳಿಗೆಯವರೆಗೂ ಅವರು ಎಂದೂ ಬೇರೆಯವರು ತುಳಿದ ಹಾದಿಯನ್ನು ತುಳಿಯಲಿಲ್ಲ. ಅದು ಸಾಹಿತ್ಯ ಕ್ಷೇತ್ರವಾಗಿರಬಹುದು, ಫೋಟೋಗ್ರಫಿಯಾಗಿರಬಹುದು, ಪುಸ್ತಕ ಪ್ರಕಟಣೆಯಾಗಿರಬಹುದು, ಪ್ರಕೃತಿ ಅಧ್ಯಯನವಾಗಿರಬಹುದು ಅಲ್ಲೆಲ್ಲ ಹಳೆಯ ಜಾಡನ್ನು ಬಿಟ್ಟು ಹೊಸ ಪೀಳಿಗೆಗೆ, ಹೊಸ ದಾರಿಯನ್ನು ನಿರ್ಮಿಸಿ ಹೊಸ ವಿಚಾರದ, ಹೊಸ ಶೈಲಿಯ, ಹೊಸ ಪ್ರಯತ್ನದ ದಿಗಂತದತ್ತ ಹೋಗುವುದಕ್ಕೆ ಪ್ರೋತ್ಸಾಹಿಸಿದರು. ಇದಕ್ಕೆ ಕಾರಣ ಅವರು ಸ್ವತಃ ತಮ್ಮ ಅರಿವು, ತಿಳುವಳಿಕೆ ಜ್ಞಾನ, ಅನುಭವಗಳ ದಿಗಂತವನ್ನು ಪ್ರಸ್ತುತ ಜೀವನ ಸಂಗತಿಗಳ ಒರೆಗಲ್ಲಿಗೆ ಉಜ್ಜುತ್ತಾ ವಿಸ್ತರಿಸುತ್ತಾ ಹೋದುದು. ಜ್ಞಾನ ಅಂದರೆ ಇದುವರೆಗೆ ಜ್ಞಾನವೆಂದು ತಿಳಿದದ್ದನ್ನು ಕಳಚಿಹಾಕಿ ಮುಂದುವರೆಯುವುದು. ಆದ್ದರಿಂದ ಮನುಷ್ಯ ಜ್ಞಾನದ ನಿಗೂಢ ಸ್ಥಳದತ್ತ ನಿತ್ಯ ನಡೆಯುವ ಪಯಣಿಗ. ಕುವೆಂಪುರವರು ತೇಜಸ್ವಿಗೆ ನಾಮಕರಣ ಮಾಡುವಾಗ ತಮ್ಮ ಮಗ ತಮ್ಮ ಪ್ರಭಾವದ, ತಮ್ಮ ಚಿಂತನೆಯ, ತಮ್ಮ ಕ್ಷೇತ್ರದ ಗಡಿಗಳನ್ನು ದಾಟಿ ಬೆಳೆಯುತ್ತಾನೆಂಬ ಕಲ್ಪನೆಯಿತ್ತೋ ಇಲ್ಲವೋ ಗೊತ್ತಿಲ್ಲ. ಬಹುಷಃ ಇದ್ದಿರಲಾರದು. ಪುರಂದರದಾಸರು ಹೇಳುವಂತೆ ನಿನ್ನ ನಾಮದ ಬಲವೊಂದಿದ್ದರೆ ಎಂಬಂತೆ ಕುವೆಂಪುರವರು ತಮ್ಮ ಮಗನಿಗೆ ವಿಶಿಷ್ಟವಾದ ಹಾಗು, ಬೇರೆಯವರು ಸಂಕೋಚಿಸಬಹುದಾದ್ದಂಥ ಹೆಸರನ್ನಿಟ್ಟರು : “ಪೂರ್ಣಚಂದ್ರ ತೇಜಸ್ವಿ”. ತಂದೆ ಇಟ್ಟ ಹೆಸರನ್ನು ಅನ್ವರ್ಥಗೊಳಿಸಲೆಂಬಂತೆಯೇ ತೇಜಸ್ವಿ ತಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಂಡರು, ತನ್ಮೂಲಕ ಕನ್ನಡ ಸಾಹಿತ್ಯವನ್ನು ಬೆಳೆಸಿದರು. ಪೂರ್ಣಚಂದ್ರನಂತೆ ಕನ್ನಡ ಸಾಹಿತ್ಯ ಗಗನದಲ್ಲಿ ತೇಜತೆಯಿಂದ ಬೆಳಗಿದರು. ನಿರೀಕ್ಷೆಯಿಲ್ಲದೆ ತಂದೆ ಇಟ್ಟ ಹೆಸರನ್ನು ಶಬ್ದಶಃ ನಿಜಗೊಳಿಸಿದರು. ಇಲ್ಲಿ ಹೆಸರಿಗೂ, ಮಗುವಿನ ಬೆಳವಣಿಗೆಗೂ ಹೇಗೆ ಅಪರೂಪವಾಗಿ ದೈವಯೋಗ ಸಂಯೋಗ ಕೂಡಿಬರುತ್ತದೆಂಬುದಕ್ಕೆ ನೊಬೆಲ್ ಪ್ರಶಸ್ತಿ ವಿಜೇತರಾದ ಅಮರ್ತ್ಯಸೇನರ ನಾಮಕರಣದ ಘಟನೆ ನೆನಪಿಗೆ ಬರುತ್ತದೆ. ೧೯೩೩ರಲ್ಲಿ ರವೀಂದ್ರನಾಥ ಟಾಗೋರರ ಶಾಂತಿನಿಕೇತನ ವಿಶ್ವವಿದ್ಯಾಲಯದ ಆವರಣದಲ್ಲಿ ಟಾಗೋರರ ಕಾರ್ಯದರ್ಶಿ ಮಗಳು ಅಮಿತಾ ಸೇನ್‌ಗೆ ಒಂದು ಗಂಡುಮಗು ಜನಿಸಿತು. ಆ ಮಗುವಿಗೆ ಟಾಗೋರರು ‘ಆಮರ್ತ್ಯ ಸೇನ್’ ಎಂದು ನಾಮಕರಣ ಮಾಡಿದರು. ಈ ಮಗುವೇ ಮುಂದೆ ದೊಡ್ಡದಾಗಿ ಮಹಾನ್ ಅರ್ಥಶಾಸ್ತ್ರಜ್ಞ ಮತ್ತು ತತ್ವಜ್ಞಾನಿಯಾಗಿ ಪ್ರಸಿದ್ಧಿ ಪಡೆದು ೧೯೯೮ರಲ್ಲಿ ನೊಬೆಲ್ ಪ್ರಶಸ್ತಿಯನ್ನು ಪಡೆದು ‘ಅಮರ್ತ್ಯ’ ಎಂಬ ಹೆಸರನ್ನು ಸಾರ್ಥಕಗೊಳಿಸಿದ. ಅಮರ್ತ್ಯ ಅಂದರೆ ಅಮರ. ಅಂತೆಯೇ ತೇಜಸ್ವಿಯವರು.

ಕಾಡಿನಲ್ಲಿರುವ ಮರವನ್ನೂ, ಪಕ್ಷಿ–ಪ್ರಾಣಿಗಳನ್ನೂ ಬಹುವಾಗಿ ಪ್ರೀತಿಸಿದಷ್ಟೇ ಅಲ್ಲ, ಅವುಗಳ ಬಗ್ಗೆ ಓರ್ವ ತಪಸ್ವಿಯಂತೆ ಅಧ್ಯಯನ ಮಾಡಿದರು. ತಮ್ಮ 'ನಿರುತ್ತರ'ದಲ್ಲಿ ಹೊರ ಜಗತ್ತಿನ ಜಂಜಾಟ, ಔಪಚಾರಿಕತೆ ಇತ್ಯಾದಿಗಳನ್ನೆಲ್ಲ ಉದಾಸೀನ ಮಾಡಿ ನಿರಂತರವಾಗಿ ತಮ್ಮ ಹೃದಯಕ್ಕೆ ಹತ್ತಿರವಾದ, ತಮ್ಮ ಮನಕ್ಕೆ ಮುದಕೊಡುವ, ತಮ್ಮ ಸ್ವಧರ್ಮವನ್ನು ಅರಿತವರಾಗಿ ಸಾಹಿತ್ಯ ಸೇವೆಯನ್ನೇ ಮಾಡಿದರು. ಸ್ವಂತ ರಚನೆಗಳನ್ನೂ ರಚಿಸಿದರು, ಇಂಗ್ಲೀಷಿನಿಂದ ಕನ್ನಡಕ್ಕೆ ಭಾವಾನುವಾದಗಳನ್ನೂ ಮಾಡಿದರು. ಕನ್ನಡ ನಾಡಿನ ಮಕ್ಕಳಿಗೆ ಕಾಡನ್ನೂ, ಕಾಡಿನೊಳಗಿನ ಅದ್ಭುತವಾದ ಜೀವನವನ್ನೂ ತಮ್ಮ ಸಾಹಿತ್ಯ ಕೃತಿಗಳ ಮೂಲಕ ಪರಿಚಯಿಸಿಕೊಟ್ಟರು. ಹೊಸ ಪೀಳಿಗೆಯ ಯುವಕರು ತಮ್ಮೆಲ್ಲ ವಿಶೇಷ ವಿದ್ಯಾಭ್ಯಾಸ ಮತ್ತು ವೃತ್ತಿಗಳ ಅನಂತರವೂ ಕೃಷಿಯ ಕಡೆಗೆ ವಾಲುವಂತೆ ಮಾಡಿದರು. ಮತ್ತು ಆ ಕೃಷಿ ಸಹಜ ಕೃಷಿಯಾಗಿರುವಂತೆ ಮಾರ್ಗದರ್ಶನ ಮಾಡಿದರು.

ತೇಜಸ್ವಿಯವರ ಮಿಲೆನಿಯಂ ಸಾಹಿತ್ಯ ಸರಣಿ ಅವರ ಬಹುಮುಖ ವ್ಯಕ್ತಿತ್ವವನ್ನು ತೋರಿಸುತ್ತದೆ. ಅದರಲ್ಲಿಯ ಕೆಲವು ವಿಚಾರಗಳು ಹೀಗಿವೆ:–

"ಇಷ್ಟೆಲ್ಲಾ ಸಂಪರ್ಕಸಾಧನಗಳಲ್ಲಿ ಕ್ರಾಂತಿಯಾಗಿದ್ದರೂ ಅನುಭವ, ಆಲೋಚನೆ, ವಿಚಾರ, ವಿಷಯಗಳ ಸಂವಹನ ಮತ್ತು ಹಸ್ತಾಂತರಕ್ಕೆ ಅತ್ಯಂತ ಅಗ್ಗದ ಮತ್ತು ಕ್ಷಿಪ್ರ ವಾಹಕಗಳೆಂದರೆ ಇಂದಿಗೂ ಪುಸ್ತಕಗಳೇ. ಕಾಲದ ಅಗ್ನಿ ಪರೀಕ್ಷೆಯನ್ನು ನಿರಾಯಾಸವಾಗಿ ಗೆದ್ದಿರುವ ಪುಸ್ತಕಗಳು ಜ್ಞಾನದ ನೀರನ್ನು ಕಡಿಮೆ ಅದೃಷ್ಟವಂತರತ್ತ ಸರ್ವದಾ ಹರಿಸುತ್ತಾ ಬಂದಿರುವ ಗಂಗಾನದಿಗಳೆಂದೇ ಹೇಳಬಹುದು."

"ಜ್ಞಾನವೆಂಬುದು ನಮ್ಮ ಅಜ್ಞಾನದ ಅರಿವಷ್ಟೇ. ಆದ್ದರಿಂದ ನಮ್ಮ ಜ್ಞಾನ ದಿಗಂತವನ್ನು ವಿಸ್ತರಿಸುತ್ತಾ ಒಂದು ದಿನ ಪರಿಪೂರ್ಣತೆಯ ಹಂತವನ್ನು ಮಟ್ಟುತ್ತೇವೆ ಎನ್ನುವುದು ಸುಳ್ಳು."

"ಎರಡನೇ ಮಹಾಯುದ್ಧದ ಅತಿದೊಡ್ಡ ಸಾಧನೆ ಎಂದರೆ ಅಣುಬಾಂಬು. ಇದು ಮಹಾಯುದ್ಧವನ್ನು ಕೊನೆಗಾಣಿಸದ್ದಲ್ಲದೆ ಯುದ್ಧಗಳನ್ನೇ ಕೊನೆಗಾಣಿಸುವತ್ತ ಮನುಷ್ಯ ಕಡ್ಡಾಯವಾಗಿ ಪ್ರಯತ್ನಿಸುವಂತೆ ಮಾಡಿರುವುದು ಈ ಶತಮಾನದ ಉತ್ತರಾರ್ಧವನ್ನು ಅವಲೋಕಿಸಿದರೆ ಗೊತ್ತಾಗುತ್ತದೆ. ಹಾಗಿದ್ದರೆ ಚರಿತ್ರೆಯಿಂದ ಮನುಷ್ಯ ಪಾಠ ಕಲಿಯುವುದು ನಿಜವೇ? ಈ ಪ್ರಶ್ನೆಗೆ ಉತ್ತರ ಯುದ್ಧೋತ್ತರ ಜನಾಂಗ ಮಹಾಯುದ್ಧವನ್ನು ಅರ್ಥಮಾಡಿಕೊಳ್ಳುವುದರ ಮೇಲೆ ನಿಂತಿದೆ."

"ಸ್ವಾತಂತ್ರ್ಯದ ಉಸಿರಾಡಲು ತವಕಿಸಿದವರ ಕತೆಗಳನ್ನು ಓದಿದಾಗ ಬಡತನ, ಅನಕ್ಷರತೆ ಇತ್ಯಾದಿ ಪರಿಹಾರ ಸಾಧ್ಯವಾದ ಸಮಸ್ಯೆಗಳಿಗೆ ನಾವು ನಮ್ಮ ಸ್ವಾತಂತ್ರ್ಯವನ್ನೇ ಒತ್ತೆಯಿಡಲು ತಯಾರಾಗಿರುವುದು ಅಕ್ಷಮ್ಯ ಎಂದೆನಿಸುತ್ತದೆ."

"ಖಭೌತ ವಿಜ್ಞಾನಿಗಳು ಕಾಲ ಒಮ್ಮುಖವಾಗಿ ಚಲಿಸುತ್ತದೆ ಎಂದು ಹೇಳುತ್ತಾರೆ. ಪುಸ್ತಕಗಳು ಈ ಹೇಳಿಕೆಯನ್ನು ಸುಳ್ಳುಮಾಡಿ ಅದು ಅನೇಕ ಮುಖವಾಗಿ ಚಲಿಸುವುದನ್ನು ತೋರಿಸಿಕೊಡುತ್ತವೆ."

"ಮನುಷ್ಯನಿಗೆ ಮರಳುಗಾಡುಗಳು ನಿರಾಸೆ, ಕಷ್ಟ, ಕಾರ್ಪಣ್ಯ, ದುಃಖ ಮತ್ತು ಸಾವನ್ನೇ ಸಂಕೇತಿಸುವುದೆಂದು ನಾನು ಭಾವಿಸಿದ್ದೆ. ಅದರಲ್ಲಿ ಕುತೂಹಲಕರವಾದುದು ಏನೂ ಇರಲು ಸಾಧ್ಯವಿಲ್ಲವೆಂದೇ ತಿಳಿದ್ದಿದ್ದೆ. ಆದರೆ ಜಗತ್ತಿನ ಆಗು ಹೋಗುಗಳಲ್ಲಿ ಮರಳುಗಾಡುಗಳು ವಹಿಸಿರುವ ಪಾತ್ರ ನೋಡಿ ನನಗೆ ಅಚ್ಚರಿಯಾಯ್ತು! ಜಗತ್ತಿನ ಅನೇಕ ಮಹಾಚಿಂತನೆಗಳು ಹುಟ್ಟಿರುವುದು ಮರಳುಗಾಡಿನಿಂದಲೇ, ಬಹುಪಾಲು ಇವತ್ತಿನ ಧರ್ಮಗಳೆಲ್ಲಾ ಹುಟ್ಟಿರುವುದು ಮರಳುಗಾಡಿನಿಂದಲೇ. ಜಗತ್ತಿನ ಬಹಳಷ್ಟು ಪ್ರಾಚೀನ ನಾಗರೀಕತೆಗಳ ಉಗಮವೆಲ್ಲಾ ಮರಳುಗಾಡಿನಿಂದಲೇ ವಿಕಾಸವಾಗಿದೆ."

"ನಮ್ಮ ಹಿಮಾಲಯ, ಅಮೆಜಾನ್, ಧ್ರುವನಿಲಯ, ಮಹಾಸಾಗರಗಳೂ ದುಸ್ಥಿತಿಗೆ ಒಳಗಾದರೆ ಅದು ಮುಂಬರಲಿರುವ ನಮ್ಮ ದುಃಸ್ಥಿತಿಯ ಮುನ್ನುಡಿಯಷ್ಟೆ"

"ವಿನಾಶದ ಅಂಚಿನಲ್ಲಿರುವ ಅನೇಕ ಜೀವ ಸಂಕುಲಗಳನ್ನು ಉಳಿಸಲು ನಾವೆಲ್ಲಾ ಪ್ರಯತ್ನಿಸಿದ್ದರೂ ಎಲ್ಲ ಜೀವ ಸಂಕುಲಗಳಿಗೂ ಒಂದು ಆಯಸ್ಸು ನಿಶ್ಚಿತ ಕಾಲಾವಧಿ ಪ್ರಕೃತಿ ನಿಗದಿಮಾಡಿದೆಯೇ? ಹಾಗಿದ್ದರೆ ನಾವು ಇನ್ನೆಷ್ಟು ಕಾಲ ನಮ್ಮ ಬುದ್ಧಿಶಕ್ತಿ ತಿಳುವಳಿಕೆಗಳು ನಮಗೆ ಸಹಾಯ ಮಾಡುವುದಿಲ್ಲವೇ? ಇದಕ್ಕೆ ನನ್ನ ಬಳಿಯಂತೂ ಸದ್ಯಕ್ಕೆ ಉತ್ತರವಿಲ್ಲ!"

"ನೌರು ದ್ವೀಪದ ತೆಂಗಿನ ಚಾಪೆಯ ಬಟ್ಟೆ ಉಟ್ಟುಕೊಂಡು ಆನಂದವಾಗಿ ಬದುಕುತ್ತಿದ್ದ ನಾನೂರು ಕಾಡುಜನರ ಕುಟುಂಬಗಳು ರಾತ್ರೋರಾತ್ರಿ ಕೋಟ್ಯಾಧಿಪತಿಗಳಾಗಿದ್ದು, ಆ ದುಡ್ಡಿನ ಮಹಾಪೂರದಲ್ಲಿ ನೆಮ್ಮದಿ, ಆರೋಗ್ಯ ಎಲ್ಲವನ್ನೂ ಕಳೆದುಕೊಂಡಿದ್ದು ನಮ್ಮನ್ನು ಬೆಚ್ಚಿಬೀಳಿಸುವ ವಿಸ್ಮಯ.

"ಈ ಶತಮಾನದ ಅದ್ಭುತಗಳಾಗಿ ಎವರೆಸ್ಟ್ ಹತ್ತಿದ್ದು, ಉಪಗ್ರಹ ಹತ್ತಿದ್ದು, ಚಂದ್ರನಲ್ಲಿ ಇಳಿದಿದ್ದು, ಕಂಪ್ಯೂಟರ್ ಚಿಪ್‌ಗಳನ್ನು ತಯಾರಿಸಿದ್ದು ಕಣ್ಣುಕೋರೈಸುವ ಸಾಧನೆಗಳಾದ್ದರಿಂದ ಜನಪ್ರಿಯತೆಯನ್ನೂ ಪ್ರಚಾರವನ್ನೂ ಪಡೆದುಕೊಳ್ಳುತ್ತವೆ. ಆದರೆ ಈ ಶತಮಾನದ ಸಾಧನೆ ಎಂದು ಯಾವುದಾದರೂ ಒಂದೇ ಒಂದು ಸಾಧನೆಯನ್ನು ಹೇಳು ಎಂದು ನನ್ನನ್ನು ಯಾರಾದರೂ ಕೇಳಿದರೆ ನಾನು ನಿಸ್ಸಂಶಯವಾಗಿ ವಿಶ್ವ ಆರೋಗ್ಯ ಸಂಸ್ಥೆ ಸಿಡುಬನ್ನು ಈ ಭೂಮಂಡಲದಿಂದಲೇ ಉಚ್ಚಾಟಿಸಿದ್ದು ಎಂದು ಹೇಳುತ್ತೇನೆ."

ಮೇಲ್ಕಾಣಿಸಿದ ತೇಜಸ್ವಿಯವರ ಮಾತುಗಳು ಕನ್ನಡಿಗರ ಮನಸ್ಸಿನಲ್ಲಿ ಹೇಗೆ ಒಂದು ಹೊಸ ದೃಷ್ಟಿಯನ್ನು ಮೂಡಿಸಿದ್ದಾರೆ ಮತ್ತು ಹೊಸ ಸಾಹಿತ್ಯದ ಸೃಷ್ಟಿ ಮಾಡಿದ್ದಾರೆ ಎಂದು ಗೊತ್ತಾಗುತ್ತದೆ.

* * *

ಮಾತು ಚಿನ್ನ, ಮೌನ ಬಲು ಚೆನ್ನ

– ಡಾ. ನರೇಂದ್ರ ರೈ ದೇರ್ಲ

ತೇಜಸ್ವಿಯವರನ್ನು ಕೊನೆಯ ಬಾರಿ ಭೇಟಿಯಾದುದು ಮೊನ್ನೆ ಮೊನ್ನೆ ಮೈಸೂರಲ್ಲಿ. ಯಾವುದೋ ಚರ್ಮದ ವ್ಯಾಧಿ ಅವರನ್ನು ಅಂಟಿಕೊಂಡು ಸಾಕಷ್ಟು ಹೈರಾಣ ಮಾಡಿತ್ತು. 'ಊರು ಬಿಟ್ಟು ಮೂರು–ನಾಲ್ಕು ತಿಂಗಳಾಯಿತು. ನಾಳೆ ನಾಡದ್ದು ಮತ್ತೆ ಮೂಡಿಗೆರೆಗೆ ಹೋಗುತ್ತಾರೆ. ಇಂದು 'ಉದಯರವಿ'ಯಲ್ಲಿದ್ದಾರೆ. ಹೋಗಿ ಮಾತನಾಡಿಸಿ' ಅಂದರು ಪುಸ್ತಕ ಪ್ರಕಾಶನದ ಶ್ರೀರಾಮ್. ನಾನು 'ಉದಯರವಿ'ಯ ಬಾಗಿಲು ತಟ್ಟಿದಾಗ ತೇಜಸ್ವಿಯವರೆ ಬಾಗಿಲು ತೆರೆದು 'ಬಾ ಮಾರಾಯ, ಯಾವುದೋ ಎಣ್ಣೆಯನ್ನು ಕಾಲಿಗೆ ತಿಕ್ಕಲು ಹೋಗಿ ತೆರಬಾರದ ಬೆಲೆ ತೆತ್ತೆ. ಈ ಕಾಯಿಲೆಗಿಂತಲೂ ದೊಡ್ಡ ಹಿಂಸೆ ಮೂಡಿಗೆರೆ ಬಿಟ್ಟು ಆಸ್ಪತ್ರೆಯಲ್ಲಿ ಮಲಗುವುದು. ನಾಳೆ ಮೂಡಿಗೆರೆಗೆ ಹೊರಟಿದ್ದೇನೆ. ಇನ್ನೆಂದೂ ಈ ಆಸ್ಪತ್ರೆಯ ಸಹವಾಸವಲ್ಲ' ಅಂದಿದ್ದರು. ಒಂದು ಇಪ್ಪತ್ತು ಕೆ.ಜಿ. ಇಳಿದಿದ್ದ ಆ ದೇಹದಲ್ಲಿ ನಾಳೆ ತಿರುಗಿ ಮೂಡಿಗೆರೆಗೆ ಹೋಗುತ್ತೇನಲ್ಲ ಎಂಬ ತೃಪ್ತಿಯಿತ್ತು.

'ಸರ್, ತೋಟದ ಕತೆ ಏನು?' ಅಂದಿದ್ದೆ. 'ಈ ನಾಲ್ಕು ತಿಂಗಳಲ್ಲಿ ಒಂದು ಮೂವತ್ತು ಭಾಗ ಹಾಳಾಗಿರಬಹುದು. ಹೋಗಿ ಸರಿ ಮಾಡಿದ್ರೆ ಆಯಿತು ಬಿಡು' ಅಂದ್ರು. ಯಾವುದೋ ಮರದ ಬುಡದಲ್ಲೋ,ಕಾಫಿ ಗಿಡದ ದಪ್ಪ ಹಸುರಿನೆಡೆಯಲ್ಲೋ, ಹಳ್ಳದ ದಂಡೆಯಲ್ಲೋ ತೇಜಸ್ವಿಯವರನ್ನು ನೋಡಿದ್ದ ನನಗೆ ಅಂದು 'ಉದಯರವಿ'ಯ ಗೇಟಿಗೆ ಒರಗಿ ಅವರು ಮಾತನಾಡುತ್ತಿದ್ದೇ ಸರಿ ಬರಲಿಲ್ಲ.

'ಉದಯರವಿ'ಯಲ್ಲಿ ನಿಮ್ಮದೊಂದು ಫೋಟೊ ಬೇಕು ಅಂದಾಗ 'ಬಾ ತೆಗೋ' ಅಂದಿದ್ದರು. ಅದು ನಾನು ತೆಗೆದ ಕೊನೆಯ ಫೋಟೊ ಆಗಿತ್ತು. ಪ್ರಾಯಶಃ ಅದು ಕುವೆಂಪು ಮನೆ ಜಗಲಿಯಲ್ಲಿ ಮಗ ನಿಂತ ಕೊನೆಯ ಚಿತ್ರವೂ ಆಗಿದೆಯೋ ಏನೋ?'

ತೇಜಸ್ವಿಯವರನ್ನು ನಾನು ಮೊದಲ ಬಾರಿಗೆ ಭೇಟಿಯಾದುದು ೧೯೯೬ರ ರಲ್ಲಿ, ೧೯೯೫ರಲ್ಲಿ 'ತರಂಗ' ಸಂಪಾದಕರು 'ಕನ್ನಡದ ಹಿರಿಯ ಸಾಹಿತಿಗಳನ್ನು ಸಂದರ್ಶಿಸಿ ಲೇಖನ ಬರೆಯಿರಿ' ಎಂದು ದೊಡ್ಡ ಹೊಣೆಗಾರಿಕೆ ಯನ್ನು ನನ್ನ ತಲೆಗಿಟ್ಟಿದ್ದರು. ಆ ಸರಣಿಯಲ್ಲಿ ಹಿರಿಯರಾದ ಪು.ತಿ.ನ, ಕೆ.ಎಸ್.ನರಸಿಂಹಸ್ವಾಮಿ, ಚದುರಂಗ, ಚನ್ನವೀರ ಕಣವಿ, ಕೈಯಾರ ಹೀಗೆ ಅನೇಕ ಕವಿ, ಲೇಖಕರನ್ನು ಭೇಟಿಯಾಗುವ, ದಿನವಿಡೀ ಅವರ ಮನೆಯಲ್ಲಿ ನಿಂತು ಅವರ ವಿಚಾರಗಳನ್ನು

ಬರೆಯುವ ಅವಕಾಶ ಬಂತು. ಈ ಸರಣಿಯಲ್ಲಿ ನಾನು ಪತ್ರಕರ್ತನಾಗಿ ಮೊದಲ ಬಾರಿಗೆ ತೇಜಸ್ವಿಯವರನ್ನು ಕಂಡೆ. 'ನನ್ನ ಸಂದರ್ಶನ ಬೇಡ ಮಾರಾಯ' ಎಂದು ಅಂದು 'ನಿರುತ್ತರ'ದ ಜಗಲಿಯಲ್ಲಿ ನಿಂತು ಪ್ರೀತಿಯಿಂದ ಕರೆದ ತೇಜಸ್ವಿಯವರನ್ನು ಅನಂತರ ಹತ್ತಾರು ಬಾರಿ ಕಂಡಿದ್ದೇನೆ. ಅವರ ಮನೆಯಲ್ಲಿ ಉಂಡಿದ್ದೇನೆ, ತಂಗಿದ್ದೇನೆ. ಅವರ ಸಾಹಿತ್ಯ ಜೀವನಾನುಭವವಷ್ಟೇ ಅಲ್ಲ, ಕುಪ್ಪಳಿಯ ಕುವೆಂಪು ಅವರ ಹಳೆಯ ಮನೆಯ ಬಗ್ಗೆ, ಕಂಪ್ಯೂಟರ್‌ನಲ್ಲಿ ಮೂಡಿಬಂದ 'ಶ್ರೀ ರಾಮಾಯಣ ದರ್ಶನಂ'ದ ಕುರಿತು, ಕಂಪ್ಯೂಟರ್‌ನಲ್ಲಿ ಪೇಂಟಿಂಗ್ ಪ್ರಯೋಗ, ಮಿಲನಿಯಂ ಪುಸ್ತಕ ಸರಣಿ– ಹೀಗೆ ನಾನು ಆಗಾಗ ತೇಜಸ್ವಿಯವರಿಗೆ ಗಂಟು ಬಿದ್ದು ಅವರ ಸಾಧ್ಯತೆ–ಗ್ರಹಿಕೆಗಳನ್ನು ಸಂಗ್ರಹಿಸಿದ್ದೇನೆ. ಕೆಲವೊಮ್ಮೆ ಅವರಿಗೆ ಗೊತ್ತಾಗದಂತೆ ಅವರ ಮಾತುಗಳನ್ನು ರೆಕಾರ್ಡ್‌ಮಾಡಿದ್ದೂ ಇದೆ! 'ತೇಜಸ್ವಿ ನಿಷ್ಠೂರವಾದಿ, ಮೌನಿ, ಎಂಬ ಎಲ್ಲಾ ಭ್ರಮೆಗಳು ಭೇಟಿಯಿಂದ ಭೇಟಿಗೆ ಕರಗುತ್ತಾ ಬಂತು. ಅವರ ಮಾತು ನಿಷ್ಠೂರಕ್ಕಿಂತ ಮೌನ' ಹೆಚ್ಚು ಪರಿಣಾಮಕಾರಿ ಎಂಬುದು ಗಮನೀಯ. ಅವರ ಮುಖಾಮುಖಿಯಲ್ಲಿ 'ಮೌನ'ವನ್ನು ನಾನು ಮಾತಿಗಿಂತ ಚೆನ್ನಾಗಿ ಗ್ರಹಿಸಿದ್ದೇನೆ. ಅವರ ಮನಸ್ಸೂ ಹಾಗೆಯೇ.

ಬಹಳಷ್ಟು ಸಾಹಿತಿಗಳು ಮೊದಲ ಸಂದರ್ಶನದಲ್ಲೇ ಬರಿದಾಗುವುದು ಹೆಚ್ಚು. ಆದರೆ ತೇಜಸ್ವಿಯವರು ಸಂದರ್ಶಕನನ್ನೇ ಬರಿದು ಮಾಡಿ ತಾವು ತುಂಬಿಕೊಳ್ಳುವವರು. ಈ ಕಾರಣಕ್ಕಾಗಿ ಅವರ ಪ್ರತಿಯೊಂದು ಸಂದರ್ಶನವೂ, ಭೇಟಿಯೂ ನನಗೆ ಅಮೂಲ್ಯವಾದ ಮಾಹಿತಿಯನ್ನು ನೀಡುತ್ತಿತ್ತು. ಬರೀ ಮಾತಲ್ಲ, ಅವರು ಆಗಾಗ ನೀಡುತ್ತಿದ್ದ ಗಿಡಗಳು ನನ್ನ ಮನೆಯಂಗಳದಲ್ಲಿ ಈಗ ಚಿಗುರೊಡೆಯುತ್ತಿವೆ.

ಒಂದು ಬಾರಿ ನಾನು ಅವರ ಮನೆಯಲ್ಲಿದ್ದಾಗಲೇ ಯಾವುದೋ ಮೆಡಿಕಲ್ ಕಾಲೇಜಿನ ವೈದ್ಯಕೀಯ ವಿದ್ಯಾರ್ಥಿಗಳು ಅವರನ್ನು ನೋಡಬೇಕೆಂದು ಬಂದಿದ್ದರು. ಜೋಗದಿಂದ ಬೆಂಗಳೂರು ಕಡೆಗೆ ಹೊರಟವರು, ಗೇಟು ತೆರೆದು ಕಾಫಿ ತೋಟ ಇಳಿದು ಮನೆಯಂಗಳದಲ್ಲಿ ಹತ್ತಾರು ವಿದ್ಯಾರ್ಥಿಗಳು ನಿಂತಿದ್ದರು. ನಾನು ಯಾವುದೋ ಹೂಗಿಡದ ಪಕ್ಕ ನಿಂತು ತೋಟವನ್ನು ಗಮನಿಸುತ್ತಿದ್ದೆ. 'ತೇಜಸ್ವಿಯವರು ಇದ್ದಾರೋ' ಎಂಬ ಪ್ರಶ್ನೆ ಬಂದಾಗ, 'ನೋಡಿ ಅಲ್ಲಿ ತೋಟದಲ್ಲಿದ್ದಾರೆ' ಎಂದು ತೋರಿಸಿದೆ. ಗುಂಪು ತೇಜಸ್ವಿಯವರ ಹತ್ತಿರಕ್ಕೆ ಹೋಯಿತು. 'ನಿಮ್ಮನ್ನು ನೋಡಲೆಂದು ಬೆಂಗಳೂರಿನಿಂದ ಬಂದಿದ್ದೇವೆ' ಎಂದರು ಹುಡುಗರು. ತೆಜಸ್ವಿಯವರು 'ಹೌದಾ, ನೋಡಿ, ಚೆನ್ನಾಗಿ ನೋಡಿ' ಎಂದರು. ಎರಡು ಕೈಗಳನ್ನು ಸೊಂಟಕ್ಕೆ ಇಟ್ಟು ಚೆಂದದ ಪೋಸ್ ಕೊಟ್ಟರು. ಐದೇ ನಿಮಿಷದಲ್ಲಿ ಅವರಲ್ಲಿ ತುಂಬಾ ಪ್ರೀತಿಯಿಂದ ಬೆರೆತರು. ಅವರಲ್ಲಿ ಒಬ್ಬ ಹುಡುಗ, 'ಸರ್

ನಿಮ್ಮನ್ನು ಕಾರಂತರಂತೆ ತಿಳಿದುಕೊಂಡಿದ್ದೆ, ನೀವು ತುಂಬಾ ಸರಳ ಸರ್' ಅಂದ. ತಕ್ಷಣ ತೇಜಸ್ವಿ ಅಂದರು, 'ಕಾರಂತರನ್ನು ನೀವು ಎಷ್ಟು ಸಲ ಮಾತನಾಡಿಸಿದ್ದೀರಿ' ಎಂದರು. ಆಗ ಆ ವಿದ್ಯಾರ್ಥಿ ಇಲ್ಲಾ ಎಂದ. ಆಗ ತೇಜಸ್ವಿಯವರು, 'ಕಾರಂತರು ನನಗಿಂತ ಚೆನ್ನಾಗಿ ಮಾತನಾಡುತ್ತಾರೆ' ಎಂದರು.

ತೇಜಸ್ವಿ-ಶಿವರಾಮ ಕಾರಂತರ ಮುಖಾಮುಖಿಯನ್ನು ಎರಡು ದಿನ 'ನಿರುತ್ತರ'ದಲ್ಲೇ ನಿಂತು ದಾಖಲಿಸುವ ಒಂದು ಅಪರೂಪದ ಅವಕಾಶದಿಂದ ವಂಚಿತವಾದುದು ನನ್ನ ಪಾಲಿನ ಕಹಿ ನೆನಪು. ಕಾರಂತರು ಅಗಲುವ ಎರಡು-ಮೂರು ತಿಂಗಳ ಹಿಂದೆ ಈ ಅಪರೂಪದ ಘಟನೆ ಮೂಡಿಗೆರೆಯಲ್ಲಿ ನಡೆಯಿತು. ಸ್ವತಃ ತೇಜಸ್ವಿಯವರ ಮನೆಗೆ ಕಾರಂತರು ಬಂದು ಎರಡು ದಿನ ಅತಿಥಿಯಾಗಿ ಆ ಕಾಡಿನ ಮನೆಯಲ್ಲಿ ಅನುಭವಿಸಿದ ಖುಷಿ, ಪಡೆದ ಅನುಭವ, ಮಾತುಕತೆ ಸಾಹಿತ್ಯದ ಪುಟದಲ್ಲಿ ದಾಖಲಾಗಬೇಕಿತ್ತು. ನಾನು ಆ ಸಂದರ್ಭದಲ್ಲಿ ಉಪಸ್ಥಿತನಿದ್ದು, ಎಲ್ಲವನ್ನೂ ಗಮನಿಸಿ ಒಂದು ಚೆಂದದ ನುಡಿಚಿತ್ರವನ್ನು ಮಾಡಬೇಕೆಂದಿದ್ದೆ. ತೇಜಸ್ವಿಯವರು ಅದಕ್ಕೆ ಅನುಮತಿಯನ್ನೂ ನೀಡಿದ್ದರು. ಆದರೆ ಬೇರೆ ಅನಿವಾರ್ಯತೆಯಿಂದಾಗಿ ನನಗೆ ಅದು ಸಾಧ್ಯವಾಗದೇ ಹೋಯಿತು. ಈಗ ಕಾರಂತರೊಂದಿಗೆ ತೇಜಸ್ವಿಯವರೂ ನಮ್ಮೊಂದಿಗಿಲ್ಲ. ನಾಗರೀಕ ಜಗತ್ತಿನಿಂದ ದೂರವಾಗಿ ಕಗ್ಗಾಡಿನೊಳಗೆ ಮನೆ ಮಾಡಿ ನಿರಂತರ ಹಸಿರಿನೊಳಗೆ ಮುಖ ಕೊಟ್ಟರೂ ಜಗತ್ತಿನ ಆಗು ಹೋಗುಗಳಿಗೆ ತೇಜಸ್ವಿ ಸ್ಪಂದಿಸುತ್ತಿದ್ದ ರೀತಿ ಗಮನಾರ್ಹ. ೧೯೯೬ ರಲ್ಲಿ ಇರಬೇಕು, ಪುತ್ತೂರಿನ ಕರ್ನಾಟಕ ಸಂಘಕ್ಕೆ ಆಗಮಿಸಿ ನನ್ನ ಮೂರು ಪುಸ್ತಕಗಳನ್ನು ಬಿಡುಗಡೆ ಮಾಡಬೇಕೆಂದು ಅವರನ್ನು ವಿನಂತಿಸಿದ್ದೆ. 'ಸಾಧ್ಯವಿಲ್ಲ' ಅಂದವರು ಒಂದು ದಿನ ಬಿಟ್ಟು, 'ಬರುತ್ತೇನೆ' ಎಂದು ಅಚ್ಚರಿ ಮೂಡಿಸಿದ್ದರು. ಪರಿಸರ, ಕೃಷಿ, ಸಾಹಿತ್ಯ, ಸಂಸ್ಕೃತಿ ಎಲ್ಲದರ ಬಗ್ಗೆಯೂ ಅಂದು ಮಾತನಾಡಿ ಪುತ್ತೂರಿನ ಸಾಹಿತ್ಯಾಸಕ್ತರ ಅನೇಕ ಪ್ರಶ್ನೆಗಳಿಗೆ ಉತ್ತರಿಸಿದ್ದರು.

ಗಮನಕ್ಕಾಗಿ ಅಡ್ಡ ಮಾತು ಹೇಳಿ ಸಮಸ್ಯೆ ಸೃಷ್ಟಿಸಿ ಆ ಮೂಲಕ ಜನಪ್ರಿಯತೆ ಪಡೆಯುವ ಇರಾದೆ ತೇಜಸ್ವಿಯವರಿಗೆ ಇರುತ್ತಿರಲಿಲ್ಲ. ಮಾತು ಕಡಿಮೆ. ಆದರೆ ಪ್ರತಿಯೊಂದು ಮಾತು ಚಾಟಿಯಂತೆ. ಒಂದು ವ್ಯವಸ್ಥೆಯ ಮೇಲಿರುವ ಕಾಳಜಿ, ಬದ್ಧತೆ ಎಲ್ಲವೂ ಅವರಲ್ಲಿ ಒಂದು ಸಾತ್ವಿಕ ಆಕ್ರೋಶವನ್ನು ಸೃಷ್ಟಿಸುತ್ತಿತ್ತು.

ಸಮಸ್ಯೆ ಇರುವುದು ಇನ್ನು. ಕಾಡಿನಲ್ಲೇ ಕನ್ನಡಕ್ಕಾಗಿ ಕಾವಲಾಗಿ ಆಗಾಗ ಚಾಟಿ ಬೀಸುತ್ತಿದ್ದ ತೇಜಸ್ವಿ ಇಲ್ಲದ ಮೇಲೆ ನಮ್ಮನ್ನು ಕಾಡುವ ಅನಾಥ ಪ್ರಜ್ಞೆಯದ್ದು. (ಹವ್ಯಾಸಿ ಪತ್ರಕರ್ತ ಹಾಗೂ ಉಪನ್ಯಾಸಕರಾಗಿರುವ ಲೇಖಕರು ತೇಜಸ್ವಿಯವರ ಒಡನಾಡಿಯೂ ಹೌದು) ಸಾಭಾರ : ವಿಜಯ ಕರ್ನಾಟಕ

ನಮ್ಮ ಪಾಡಿಗೆ ಇರಲು ಬಿಡ್ರೋ....

– ಲಕ್ಷಣ ಕೊಡಸೆ

'ನೀವು ಬರೆದ ಕಗ್ಗವನ್ನೆಲ್ಲಾ ಜನ ಕೊಂಡು ಓದ್ತಾ ಇಲ್ಲ. ಅದಕ್ಕೆ ಪುಸ್ತಕ ಕೊಂಡು ಓದೋ ಪ್ರವೃತ್ತಿ ಬೆಳದೇ ಇಲ್ಲ. ಅನ್ನೋದು ತಪ್ಪು..'

ಕೆ.ಪಿ. ಪೂರ್ಣಚಂದ್ರ ತೇಜಸ್ವಿ 'ಪಂಪ' ಪ್ರಶಸ್ತಿ ಪ್ರಕಟವಾದ ಸಂದರ್ಭದಲ್ಲಿ ಮೂಡಿಗೆರೆಯ ನಿವಾಸದಲ್ಲಿ ಸಂದರ್ಶನ ನೀಡಿದ್ದನ್ನು ವೃತ್ತಿ ಬದುಕಿನ ಧನ್ಯತೆಯ ಕ್ಷಣಗಳೆಂದು ಭಾವಿಸಿದ್ದವನಿಗೆ ಗುರುವಾರ ಮಧ್ಯಾಹ್ನ ಬಂದ ಸುದ್ದಿ ತಕ್ಷಣಕ್ಕೆ ನೀಡಿದ್ದು ಆಘಾತ. ಈಚೆಗಷ್ಟೇ ಅವರೊಂದಿಗೆ ದೂರವಾಣಿಯಲ್ಲಿ ಮಾತನಾಡಿದ್ದೆ. ಕಾಲಿನ ಚಿಕಿತ್ಸೆಗಾಗಿ ಬೆಂಗಳೂರಿನಲ್ಲಿಯೇ ತಿಂಗಳುಗಟ್ಟಲೆ ಕಳೆದು ಚೇತರಿಸಿಕೊಂಡಿದ್ದರು. ಬೆಂಗಳೂರಿನಿಂದ ಮೈಸೂರಿಗೆ ತೆರಳಿ ಅಲ್ಲಿಂದ ಮೂಡಿಗೆರೆಗೆ ವಾಪಸಾಗಿದ್ದ ಸಂದರ್ಭದಲ್ಲಿಯೇ ಇನ್ನೊಮ್ಮೆ ಮಾತನಾಡುವ ಪ್ರಸಂಗ. ಅವರ ಸೋದರಿ ತಾರಿಣಿ ಚಿದಾನಂದ ಅವರ 'ಮಗಳು ಕಂಡ ಕುವೆಂಪು' ಕೃತಿಯಲ್ಲಿನ ಒಂದೆರಡುಪ್ರಸಂಗಗಳನ್ನು ಎತ್ತಿಕೊಳ್ಳಲು ಅನುಮತಿ ಕೇಳಿದಾಗ 'ಅವಳನ್ನೇ ಕೇಳಿ' ಎಂದವರು, 'ಎಷ್ಟು ಚೆನ್ನಾಗಿ ಬರೆದಿದ್ದಾಳ್ರೀ, ವಂಡ್ರಪುಲ್' ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದರು.

ತೇಜಸ್ವಿ ಅವರನ್ನು ಒಮ್ಮೆ ಮಾತ್ರ ಭೇಟಿಯಾಗಿದ್ದಷ್ಟೆ. ಈಚಿನ ಐದಾರು ವರ್ಷಗಳಲ್ಲಿ ನಡೆಸಿದ್ದೆಲ್ಲ ದೂರವಾಣಿ ಸಂಭಾಷಣೆ. ಆದರೆ ಪ್ರತಿ ಸಲ ಸಂಪರ್ಕಿಸಿದಾಗಲೂ ಮೂಡಿಗೆರೆಯ ಮನೆಯಲ್ಲಿ ತೋರಿದ ವಿಶ್ವಾಸ, ಅಕ್ಕರೆ, ಅಭಿಮಾನ. ಅವರದು ಹಂಗಿಲ್ಲದ ಬದುಕು. ಪ್ರಖರ ವೈಚಾರಿಕತೆ. ಅನಿಸಿದ್ದನ್ನು ನಿರ್ದಾಕ್ಷಿಣ್ಯವಾಗಿ ಹೇಳುವ ಎದೆಗಾರಿಕೆ. ಪಂಪ ಪ್ರಶಸ್ತಿ ಸ್ವೀಕಾರಕ್ಕೆ ಅವರು ಬನವಾಸಿಗೆ ಹೋಗಿರಲಿಲ್ಲ. ಜನ ನಿರಾಶರಾದ ಸುದ್ದಿ ಹಿನ್ನೆಲೆಯಲ್ಲಿ 'ಯಾಕೆ ಸಾರ್ ಹೋಗಲಿಲ್ಲ' ಎಂದು ದೂರವಾಣಿಯಲ್ಲಿ ವಿಚಾರಿಸಿಕೊಂಡವನಿಗೆ 'ಆ ಪೋಲೀಸರು, ಜನರ ತಳ್ಳಾಟ, ನೂಕುನುಗ್ಗಲು, ಯಾರಿಗೆ ಬೇಕ್ರಿ ಅಂಥ ಗಲಾಟೆ' ಎಂದು ನಗುನಗುತ್ತ ಕಾರಣ ನೀಡಿದ್ದರು. ಗುಂಪು-ಗದ್ದಲದಿಂದ ದೂರವಿದ್ದರೂ ಅವರ ಸಾಹಿತ್ಯಕ್ಕೆ ಸಾಮಾನ್ಯ ಜನರಿಂದಲೇ ಅಪಾರ ಬೇಡಿಕೆ ಇರುವುದು ಸತ್ವ ಇರುವುದನ್ನು ಬರೆದರೆ ಜನ ತಿರಸ್ಕರಿಸುವುದಿಲ್ಲ ಎಂಬುದಕ್ಕೆ ನಿದರ್ಶನ. 'ನಿಮಗೆ ಜ್ಞಾನಪೀಠ ಬರುವುದನ್ನು ಕಾಯುತ್ತಿದ್ದೇವೆ' ಎಂದು ಒಮ್ಮೆ ಹೇಳಿದ್ದಕ್ಕೆ 'ಸುಮ್ನೆ ನಮ್ಮನ್ನ ನಮ್ಮ ಪಾಡಿಗೆ ಇರಲು ಬಿಡ್ರೋ ಮಾರಾಯರ' ಎಂದು ಹಿರಿಯನಣ್ಣನಂತೆ ಗದರಿಕೊಂಡಿದ್ದರು.

ಓದಿದ್ದು ಕನ್ನಡ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ. ಮನಸ್ಸು ಮಾಡಿದ್ದರೆ ಯಾವುದೇ ಕಾಲೇಜು ಇಲ್ಲವೇ ವಿಶ್ವವಿದ್ಯಾಲಯದಲ್ಲಿ ಉನ್ನತ ಸ್ಥಾನಗಳಿಗೆ ಹೋಗಬಹುದಿತ್ತು. ಆದರೆ ಬಾಲ್ಯದಿಂದ ರೂಢಿಯಾಗಿದ್ದ ಸಾಹಸ ಪ್ರವೃತ್ತಿ ಅವರನ್ನು ಸ್ವಂತ ತೋಟ ಮಾಡಿಕೊಂಡು ಕಾಡು ಮೇಡು ಸುತ್ತುವ ಕೆಲಸಕ್ಕೆ ಪ್ರೇರೇಪಿಸಿತ್ತು. 'ಒಂದು ಸಾಂಸ್ಥಿಕ

ಚೌಕಟ್ಟಿನ ವ್ಯಾಪ್ತಿಯಲ್ಲಿ ಸಿಲುಕದ ಕಾರಣ ನನಗೆ ತೋಚಿದಂತೆ ಇರಲು ಸಾಧ್ಯವಾಗಿದೆ' ಎಂದಿದ್ದರು. ಅವರು ತೋಟ ಮಾಡಿದರು. ಕೃಷಿಯ ಲಾಭನಷ್ಟವನ್ನು ಸ್ವಂತವಾಗಿ ಅನುಭವಿಸಿದರು. ಅದನ್ನೆಲ್ಲ ತಮ್ಮ ಸಾಹಿತ್ಯ ಕೃತಿಗಳಲ್ಲಿ ತಂದರು. ಅವರ ಮಂದಣ್ಣಿ, ಮಾರ, ಪ್ಯಾರ, ವೆಂಕಟ, ಕಿವಿಯಂತಹ ಪಾತ್ರಗಳು ಪೇಟೆ, ಸಂತೆಮಾಳಗಳಲ್ಲಿ ಎದುರಾಗುವ ಸಾಮಾನ್ಯ ಜನ, ಅವರ ಈಚಿನ ಕೃತಿ 'ಮಾಯಾಲೋಕ'ದಲ್ಲಿಯೂ ವರ್ತಮಾನದ ವಿಸ್ಮಯವೇ ಸ್ಥಾಯಿ. ನಿತ್ಯ ಬದುಕಿನಲ್ಲಿ ಎದುರಾಗುವ ರಕ್ತ ಮಾಂಸಗಳ ಪಾತ್ರಸೃಷ್ಟಿ ತೇಜಸ್ವಿ ವೈಶಿಷ್ಟ್ಯ. ಸನ್ನಿವೇಶಗಳಿಂದ ಸಹಜವಾಗಿ ಉಕ್ಕುವ ಹಾಸ್ಯ ಅವರ ವಿಶೇಷತೆ.

ಸಾಹಿತ್ಯಕ್ಕಿಂತ ಬದುಕು ದೊಡ್ಡದು ಎಂದು ತೇಜಸ್ವಿ ತಿಳಿದಿದ್ದರೂ ಅವರದು ಕುವೆಂಪು ಅವರಂತೆ ಪ್ರಕೃತಿಯ ವಿಸ್ಮಯಕ್ಕೆ ಬೆರಗುಪಡುವ, ಶಿವರಾಮ ಕಾರಂತರಂತೆ ಅದಕ್ಕೆ ಕಾರಣಗಳನ್ನು ಹುಡುಕುವ ಶೋಧಕ ಪ್ರವೃತ್ತಿ. ಮೂಢನಂಬಿಕೆ-ಆಚರಣೆಗಳನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸುವ, ಸಾಮಾಜಿಕ-ರಾಜಕೀಯ ಬದಲಾವಣೆಗಳಿಗೆ ಆರೋಗ್ಯಕರವಾಗಿ ಸ್ಪಂದಿಸುವ ಅಪರೂಪದ ಬರಹಗಾರ ತೇಜಸ್ವಿ, ಅವರದು ಕೃತಿ ಆಧರಿಸಿದ ಚಿಂತನೆ. ಕಾಲೇಜು ದಿನಗಳಲ್ಲಿಯೇ ಕನ್ನಡಕ್ಕಾಗಿ ಬೀದಿಗಿಳಿದು ಚಳವಳಿ ಮಾಡಿದ್ದ ತೇಜಸ್ವಿ ನಂತರದ ವರ್ಷಗಳಲ್ಲಿ ಸಮಾಜವಾದಿ ಚಿಂತಕರಾಗಿ ರೂಪುಗೊಂಡರು. ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳ ಎದುರು ದೇಶದ ಕೃಷಿ-ಕೈಗಾರಿಕೆಗಳು ನೆಲಕಚ್ಚುತ್ತಿರುವುದನ್ನು ಅಸಹಾಯಕತೆಯಿಂದ ನೋಡುವುದರ ವಿನಾ ಅನ್ಯಮಾರ್ಗವಿಲ್ಲ ಎಂಬುದನ್ನು ಅರ್ಥಮಾಡಿಕೊಂಡಿದ್ದರು. ಅದನ್ನು ಸ್ಪಷ್ಟವಾಗಿ ಹೇಳುತ್ತಿದ್ದರು ಕೂಡ. ಸದ್ಯದ ಪರಿಸ್ಥಿತಿಯಲ್ಲಿ ನಮ್ಮ ಯುವಜನತೆ ಐ.ಟಿ ಕೂಲಿಗಳಾಗಿ ಬದಲಾಗದೆ ನಿರುದ್ಯೋಗ ನಿವಾರಣೆಯ ಅನ್ಯಮಾರ್ಗವಿಲ್ಲ ಎಂಬುದನ್ನು ನೋವಿನಿಂದ ಹೇಳುತ್ತಿದ್ದರು.

ತೇಜಸ್ವಿ ಅವರ ಸಾಹಿತ್ಯದ ಹರಹು ದೊಡ್ಡದು. ಸಮೃದ್ಧಿಗಿಂತ ಗುಣಮಟ್ಟ ಪ್ರಧಾನ. ಹಠಕ್ಕೆ ಬಿದ್ದು ಬರೆಯವುದು ಅವರ ಜಾಯಮಾನವಲ್ಲ. ಜೀವನದಲ್ಲಿ ಹಲವು ಬಗೆಯ ಆಸಕ್ತಿಗಳನ್ನು ರೂಢಿಸಿಕೊಂಡಿದ್ದ ಅವರು ಅವನ್ನೆಲ್ಲ ಸಾಹಿತ್ಯದಲ್ಲಿ ತಂದವರು. ಕಥೆ, ಕಾದಂಬರಿಗಳ ಶುದ್ಧ ಸಾಹಿತ್ಯದಿಂದ, ಸಹಜ ಕೃಷಿ, ಮಾನವ ವಿಕಾಸದವರೆಗಿನ ವಿಸ್ತೃತ ಸಾಹಿತ್ಯಾಭಿವ್ಯಕ್ತಿ, ಕೃಷಿಕನಾಗಿ ಪಡೆದ ಅನುಭವ ಸಾಹಿತ್ಯದಲ್ಲಿ ಸಮೃದ್ಧ ಫಸಲು ಕೊಟ್ಟಿದೆ.

ತೇಜಸ್ವಿ ಅವರ ಬರವಣಿಗೆಯಲ್ಲಿನ ಆಪ್ತತೆ, ನಿಷ್ಠುರ ಪ್ರಾಮಾಣಿಕತೆ, ಹಂಗಿಗೆ ಒಳಗಾಗದ ಸ್ವತಂತ್ರ ಪ್ರವೃತ್ತಿ ಅವರ ಓದುಗರಲ್ಲಿ, ಅಭಿಮಾನಿಗಳಲ್ಲಿ ತಮ್ಮವನೆಂಬ ಭಾವನೆಯನ್ನು ಮೂಡಿಸಿರುವುದು ಆಶ್ಚರ್ಯವಲ್ಲ. ಅವರ ಹಠಾತ್ ನಿರ್ಗಮನ ಸಾಹಿತ್ಯ ಅಭಿಮಾನಿಗಳ ಮನೆಗಳಲ್ಲಿ ಮನೆಯ ಹಿರಿಯನೊಬ್ಬನನ್ನು ಕಳೆದುಕೊಂಡ ಸೂತಕದ ಛಾಯೆ. ತಮ್ಮ ಕೃತಿಗಳಿಂದ ಕುವೆಂಪು-ಕಾರಂತರ ಪರಂಪರೆಯನ್ನು ಮುಂದುವರೆಸಿದಂತೆ ವರ್ತಮಾನಕ್ಕೆ ಸದಾ ತೆರೆದುಕೊಂಡಿದ್ದ ತೇಜಸ್ವಿ ಅವರಿಂದ ಇನ್ನೂ ಹೆಚ್ಚಿನ ಬರವಣಿಗೆಯ ನಿರೀಕ್ಷೆ ಇತ್ತು. ಅವರ ನಿರ್ಗಮನದಿಂದ ಉಂಟಾಗಿರುವ ಖಾಲಿ ಖಾಲಿ ಜಾಗ ತುಂಬುವುದು ಕಷ್ಟ

(ಸಾಭಾರ: ಪ್ರಜಾವಾಣಿ)

ತೇಜಸ್ವಿ ಇಲ್ಲದ ಜಗತ್ತಿನಲ್ಲಿ ನಾನೂ ಇರಲಾರೆ...

– ಯು.ಆರ್.ಅನಂತಮೂರ್ತಿ

ತೇಜಸ್ವಿ ನಮ್ಮ ನಡುವಿನ ಒಬ್ಬ ಲೇಖಕನಾಗಿ ನಮ್ಮೆಲ್ಲರಿಗಿಂತ ಆಳವಾಗಿ ಭಿನ್ನವಾಗಿರೋದು ಅವರ ವಿಸ್ಮಯದ ಭಾವನೆಯಲ್ಲಿ. ಅವರು ಸತ್ತಿದ್ದೂ ವಿಸ್ಮಯವಾಗಿ. ಯಾವುದೋ ಒಂದು ವಿಚಿತ್ರ ಪಕ್ಷಿಯನ್ನು ಕಂಡು ವಿಸ್ಮಯಕ್ಕೊಳಗಾದವರಂತೆ ಸಾವಿನಿಂದ ಬೆರಗಾಗಿ ಅವರು ಸತ್ತರು.

ನಾನು ೧೭ರ ವಯಸ್ಸಿನಿಂದಲೇ ಬಲ್ಲೆ. ಆಗ ಮೈಸೂರು ಬಿಟ್ಟು ಶಿವಮೊಗ್ಗಕ್ಕೆ ಹಲವಾರು ಆಸಕ್ತಿ ಜತೆ ಬಂದ್ರು. ಪಾಠಪ್ರವಚನಕ್ಕಿಂತ ಓದಿನಲ್ಲಿ ಆಸಕ್ತಿ ಇತ್ತು. ಒಂದು ಹಾಸ್ಯಪ್ರಜ್ಞೆ ಇತ್ತು. ನಾನಾಗ ೨೪–೨೫ರ ಮೇಷ್ಟ್ರು. ಒಂದು ದಿನ ಇದ್ದಕ್ಕಿದ್ದಂತೆ ಎದ್ದು ನಿಂತು 'ಸರ್, ಒಂದು ಪ್ರಶ್ನೆ ಕೇಳಲಾ' ಅಂದರು. 'ಏನು' ಅಂದೆ. 'ನೀವು ಕ್ರಾಪ್ ಕಟ್‌ಗೆ ಪ್ರತಿ ಬಾರಿನೂ ಬೆಂಗಳೂರಿಗೆ ಹೋಗ್ತೀರಂತೆ, ನಿಜವಾ?' ಅಂದರು. ಮೇಷ್ಟ್ರಿಗೆ ಈ ರೀತಿಯ ಇರಾದೆಗಳೆಲ್ಲಾ ಇದಾವಾ ಅಂತ ಅವರಿಗೆ ಕೋಪ ಬಂದಿತ್ತು. 'ಇಲ್ಲ' ಅಂದೆ. ಆಮೇಲೆ ನನಗೂ ಅವರಿಗೂ ಬಹಳ ಹತ್ತಿರದ ಸ್ನೇಹವಾಯ್ತು.

ಭಾಳ ಒಳ್ಳೆ ಲೇಖಕನಲ್ಲಿ ಒಂದು ಗುಣ ಇರಬೇಕು. ಆತನ ಭಾವನಾಲೋಕ ಶುದ್ಧವಾಗಿರಬೇಕು, ತನಗೆ ಏನನಿಸ್ತಿಲ್ಲವೋ ಅದು ಅನಿಸ್ತಾ ಇದೆ ಅಂತ ಆತ ಒಪ್ಪಿಕೊಳ್ಳಬಾರದು. ಹಾಗೆ ಒಪ್ಪಿಕೊಂಡರೆ ಅವನ ಲೋಕ ಕೃತ್ರಿಮದ್ದಾಗುತ್ತದೆ. ಕೃತ್ರಿಮದ ಬರವಣಿಗೆ ಆರಂಭವಾಗುತ್ತದೆ. ತೇಜಸ್ವಿಗೆ ಈ ಕೃತ್ರಿಮತೆ ಸಾಧ್ಯವಾಗೋದಿಲ್ಲ. ಏಕೆಂದರೆ ತೇಜಸ್ವಿಯ ಭಾವನಾಲೋಕ ಶುದ್ಧವಾಗಿತ್ತು. ಎಷ್ಟು ಗಂಭೀರವಾದ್ದನ್ನೂ ಹಗುರವಾಗಿ ಹೇಳಬಲ್ಲವರಾಗಿದ್ದರು. ಅವರು ಪ್ರಪಂಚಕ್ಕೆ ತೆರೆದುಕೊಳ್ಳುತ್ತಿದ್ದದ್ದೇ ಹಾಗೆ.

ಕುತೂಹಲ, ಅವರಿಗೆ ಎಲ್ಲದರ ಬಗ್ಗೆ ಕುತೂಹಲ. ಗಿಡ, ಮರ, ಕಾಡು, ಪಕ್ಷಿ, ಮನುಷ್ಯರು.. ಅವರ ಕುತೂಹಲ ಯಾವ ಮಟ್ಟಕ್ಕೆ ಅಂದ್ರೆ.. ಅವರು ಬರಿಯೋತನಕ ನಾವೆಲ್ಲ ಬರೀತಿದ್ದಿದ್ದು ನಮ್ಮಂತಹ ಪಾತ್ರಗಳ ಬಗ್ಗೆ, ಜನರ ಸುಖದುಃಖಗಳ ಬಗ್ಗೆ. ಅವರೂ ಮೊದಮೊದಲು ಹಾಗೆಯೇ ಬರೆದವರು. ಬಳಿಕ ಅಂತಹ ಬರವಣಿಗೆ ತನಗೆ ಬೇಡ ಅಂತನಿಸಿತು ಅವರಿಗೆ. ಬೇರೆ ಥರಾ ಬರಿಯೋಕೆ ಶುರುಮಾಡಿದ್ರು. ಇದರಿಂದಾಗಿ ಅವರಿಗೆ ಬೇರೆಯೇ ಥರದ, ನಾವು ಗುರುತಿಸದೇ ಇರುವ ಮನಷ್ಯರು ಕಾಣಲಾರಂಭಿಸಿದರು. ಅವರುಯಾರಪ್ಪ ಅಂದ್ರೆ ಅತ್ತ ನಗರದವರೂ ಅಲ್ಲ, ಇತ್ತ ತೀರಾ ಗ್ರಾಮೀಣರೂ ಅಲ್ಲ.. ಅಂದರೆ ಗ್ರಾಮೀಣ –ಪಟ್ಟಣವೆಂಬ ಹೊಸ ಪ್ರಪಂಚ. ಅದನ್ನು ನಾವು ಗಮನಿಸಿಯೇ ಇರಲಿಲ್ಲ. ಇದು ಕಾರಂತರಲ್ಲೂ ಇಲ್ಲ, ಕುವೆಂಪು ಅವರಲ್ಲೂ ಇಲ್ಲ, ಈ ಮೊಫ್ಯೂಸಲ್ ಟೌನ್ ಮೊದಲ ಬಾರಿಗೆ ಕನ್ನಡ ಸಾಹಿತ್ಯಲೋಕಕ್ಕೆ ಬಂದಿದ್ದು ತೇಜಸ್ವಿ ಅವರಿಂದ. ಮೂಡಿಗೆರೆಯಂತಹ ಊರು. ಅಲ್ಲಿ ನಡೆಯುವ ರಾಜಕೀಯ, ಅಲ್ಲಿನ ಭ್ರಷ್ಟಾಚಾರ, ಅಲ್ಲಿನ ತಮಾಷೆಗಳು.. ಅವರ ಪ್ರಾಣಿಪ್ರಪಂಚ ಎಷ್ಟು ವಿಚಿತ್ರವಾಗಿದೆಯೋ ಅಷ್ಟೇ ವಿಚಿತ್ರವಾಗಿದೆ ಅವರ ಮನುಷ್ಯಲೋಕ.

ಇಲ್ಲಿನ ಜನರ ಘಟಿಂಗತನವನ್ನು ಕೆಟ್ಟದು ಎಂದು ಅವರು ಹೇಳುತ್ತಿರಲಿಲ್ಲ.

ಅವಕಾಶಗಳಿಲ್ಲದೆ ಈ ರೀತಿ ಪರಿವರ್ತಿತರಾಗ್ತಾರೆ ಎಂದವರು ಅನ್ತಿದ್ರು, ಅವರ ನೋಟದಲ್ಲಿ ಮಾನವೀಯತೆ ಇರ್ತಿತ್ತು. ಇದೆಲ್ಲದರ ಹಿಂದೆ ಅವರ ಸಮಾಜವಾದೀ ರಾಜಕೀಯ, ಪರಿಸರದ ಪ್ರೇಮವಿತ್ತು.

ಜೊತೆಗೆ ಅವರ ಬಳಿ ನಿರ್ಜನವಾದ ಕಾಡು ಇತ್ತು, ಈಗಿನ ಪ್ರಪಂಚದ ಶಕ್ತಿಮೂಲಗಳನ್ನು ಗುರುತಿಸಬಲ್ಲವರಾಗಿದ್ದರು. ಈಗಿನ ಕಾಲದ ಹೆಣ್ಮಕ್ಕಳು ಹೊಡೆದಾಡೋದು, ಸಮಾಜದಲ್ಲಿರೋ ಶಕ್ತಿ ಎಲ್ಲವನ್ನೂ ಗುರುತಿಸುತ್ತಿದ್ದರು.

ಅವ್ರು ಅಪ್ಪಟ ಕ್ರಿಯೇಟಿವ್ ಆಗಿದ್ರು. ಇರೋದನ್ನು ವಿವರಿಸೋದ್ರಲ್ಲಿ ಕೆಲವರು ತೃಪ್ತರಾದ್ರೆ, ಇಲ್ದೇ ಇರೋದನ್ನ ಸೃಷ್ಟಿಸಿ ಜನರಿಗೆ ವಿನೋದ ನೀಡೋದು ಇನ್ನು ಕೆಲವರ ಬಗೆ. ತೇಜಸ್ವಿದು ಅವೆರಡೂ ಅಲ್ಲ. ಅವರು ಇರೋದನ್ನೇ ಗ್ರಹಿಸಿ ತನ್ನದೇ ಆದ ಹೊಸದನ್ನು ಅಂದರೆ ನಾವು ಕಾಣದೇ ಇರೋದನ್ನು ತೋರಿಸ್ತಾ ಇದ್ರು. ಅವರದೊಂದು 'ಅವನತಿ' ಅಂತ ಕಥೆ ಇದೆ. ಅದರಲ್ಲೊಬ್ಬ ಸುಂದರ ಹುಡುಗಿ ಬರ್ತಾಳೆ. ಬಹುಶಃ ಪ್ರಪಂಚದ ಮಹಾಸುಂದರಿ. ಆದರೆ ಹಳ್ಳಿಯವರಿಗೆ ಆಕೆಯ ಸೌಂದರ್ಯ ಗೊತ್ತೇ ಇರುವುದಿಲ್ಲ. ಮೊಲೆಯ ಹಾಲಿನಿಂದ ಯಾವುದೋ ಕಣ್ಣಿನ ರೋಗ ಗುಣವಾಗ್ತದೆ ಅನ್ನೋದೇ ಮುಖ್ಯವಾಗ್ತದೆ. ಹೀಗೆ ಒಂದು ಜೀವನಕ್ರಮದಲ್ಲಿ ಅನೇಕ ರೀತಿಯ ಪ್ರತಿಭೆಗಳು ಅವನತಿ ಹೊಂದುತ್ತವೆ ಅಂತ ಸೂಚಿಸ್ತಾರೆ. ಇದು ಭಾರತೀಯ ಸಾಹಿತ್ಯ ಲೋಕದ ಒಳ್ಳೆಯ ಕಥೆಗಳಲ್ಲಿ ಒಂದು.

ತೇಜಸ್ವಿ ಪ್ರತಿಭೆಗೆ 'ಅಬಚೂರಿನ ಪೋಸ್ಟ್ ಆಫೀಸು' ಇನ್ನೊಂದು ಸಾಕ್ಷಿ. ತೇಜಸ್ವಿ ಅವರಲ್ಲಿ ಕುವೆಂಪು ಹಾಗೂ ಕಾರಂತರು ಸಂಧಿಸಿದ್ದಾರೆ. ಅವರ ವಿಸ್ಮಯದ ಲೋಕದಲ್ಲಿ ಕುವೆಂಪು ಅವರ ಭಾವನಾತ್ಮಕತೆ ಹಾಗೂ ಕಾರಂತರ ಶೋಧನಾತ್ಮಕತೆಗಳೆರಡೂ ಇದ್ದವು.

ತೇಜಸ್ವಿಗೆ ವಿಜ್ಞಾನದಲ್ಲಿ ಬಹಳ ಆಸಕ್ತಿ. ನಮ್ಮೆಲ್ಲರಿಗಿಂತ ಬೇಗ ಕಂಪ್ಯೂಟರ್, ಇಂಟರ್ನೆಟ್ ಬಳಸಿದ್ರು, ಸಾಧ್ಯವಾದ್ದೆಲ್ಲವನ್ನೂ ತೆಗೆದು ಬರೆದರು. ಕನ್ನಡದಲ್ಲಿ ಮಕ್ಕಳಿಗೆ ಸಾಕಷ್ಟು ಪುಸ್ತಕಗಳಿಲ್ಲ ಎಂಬುದು ಅವರ ಭಾವನೆಯಾಗಿತ್ತು. ಅದನ್ನು ಅರ್ಥಪೂರ್ಣ ರೀತಿಯಲ್ಲಿ ತುಂಬಿದ್ರು, ಅದನ್ನು ನಾನು ಓದಿದ್ದೇನೆ, ಅದನ್ನು ಓದಿ ಬೆಳೆದ ಮಕ್ಕಳನ್ನೂ ನೋಡಿದ್ದೇನೆ. ವಿಜ್ಞಾನದಲ್ಲಿ ಬರೆದಾಗ ಒಣಗಿರ್ತಿರಲಿಲ್ಲ, ಅವರ ಕಲ್ಪನಾಶಕ್ತಿಯಿಂದ ಬಂದ ಅವುಗಳಲ್ಲಿ ಮೃದುತ್ವ ಇರುತ್ತಿತ್ತು.

ಕನ್ನಡದ ತಂತ್ರಾಂಶ ತಯಾರಿಕೆ ಇತ್ಯಾದಿ ತಂತ್ರಜ್ಞಾನದ ಆಸಕ್ತಿ ಕ್ಯಾಮೆರಾದಿಂದಲೇ ಅವರಿಗೆ ಬಂದಿರಬೇಕು. ನಾನು ಅವರನ್ನೊಮ್ಮೆ ಮೂಡಿಗೆರೆಯಲ್ಲಿ ನೋಡಿದಾಗ ಪಕ್ಷಿಯೊಂದರ ಚಿತ್ರ ತೆಗೆಯಲು ಅದೆಷ್ಟು ದಿನಗಳ ಕಾಲ ಕಾದರೆಂದರೆ ನನಗೆ ಅವರು ಒಬ್ಬ ತಪಸ್ವಿಯೇನೋ ಅನಿಸಿತು. ಆ ವಿಸ್ಮಯದ ಮೂಲದಲ್ಲೇ ಅವರ ವಿಜ್ಞಾನದ ಆಸಕ್ತಿ ಹುಟ್ಟಿತ್ತು.

ಒಂದು ಬಾರಿ ಮೂಡಿಗೆರೆಯ ಅವರ ಮನೆಗೆ ಹೋಗಿದ್ದೆ. ಮಾತಾಡ್ತಾ ಇದ್ದಾಗ ಥಟ್ಟನೆ ಹೇಳಿದ್ರು, 'ಈ ಪ್ರಂಪಚದಲ್ಲಿ ದೇವರು ಇದ್ದಾನೆ ಅಂತ ತಿಳಿದಾಗ ಎಂತಹ ವಿಸ್ಮಯ ಹುಟ್ಟಬಹುದೋ ಅದೇ ದೇವರು ಇಲ್ಲ ಅಂತ ತಿಳಿದಾಗಲೂ

ಪ್ರಂಪಚದ ವಿದ್ಯಮಾನಗಳೆಲ್ಲಾ ಅಷ್ಟೇ ವಿಸ್ಮಯಕಾರಿಯಾಗಬಹುದು' ಅಂತ. ಅವರು ಈಶ್ವರವಾದಿಯೂ ಅಲ್ಲ, ನಿರೀಶ್ವರವಾದಿಯೂ ಅಲ್ಲ. ಈ ಪ್ರಪಂಚದ ವಿಸ್ಮಯಗಳಿಗೆ ತೆರೆದುಕೊಂಡವರು ಯಾವ ಜಾತಿ, ಧರ್ಮವನ್ನೂ ಪಾಲಿಸುವುದಿಲ್ಲ. ಅವರು ನಿಧಾನವಾಗಿ ಕುವೆಂಪುರವರ ವಿಶ್ವಮಾನವತೆ ಕಡೆ ಚಲಿಸ್ತಾ ಇದ್ದರು. ಅವರಲ್ಲಿದ್ದ ಈ ಬಂಡಾಯ, ರಾಜಕಾರಣ ಎಲ್ಲವೂ ಈ ಚಲನೆಗೆ ಅಡ್ಡಿ ಮಾಡುವ ಮನುಷ್ಯನ ಸಣ್ಣತನ, ಅಡ್ಡದಾರಿಗಳು ಇದರ ಬಗ್ಗೆ ಅವರಲ್ಲಿ ಅಸಹನೆ ಇತ್ತು.

ನನಗೆ ಅವರ ಹೆಂಡತಿ, ಮಕ್ಕಳೂ ಗೊತ್ತು. ಅಪರೂಪದ ಮನೆತನ ಅವರದ್ದು. ಅವರು ಅವರ ಅಪ್ಪನ ಹೆಸರನ್ನು ಹೇಳಿಕೊಂಡು ಏನೂ ಮಾಡ್ಲಿಲ್ಲ. ಅವ್ರು ಯೂನಿವರ್ಸಿಟಿಗೆ ಪ್ರೊಫೆಸರ್ ಆಗಿ ಹೋಗ್ಬಹುದಿತ್ತು. ಆದರೂ ಪರಿಶುದ್ಧತೆ ಕಾಪಾಡಿಕೊಂಡಿದ್ರು. ಅವರ ತಂದೆ ವಿಸಿಯೂ ಆಗಿದ್ದರಿಂದ ಅದು ಅಗತ್ಯವೂ ಆಗಿತ್ತು.

ಅವರಿಗೆ ಕೆಲವು ಪ್ಯಾಶನ್‌ಗಳೂ ಇದ್ದವು. ಇಂಡಿಯಾ ಜಾತೀನ ಮೀರಬೇಕು ಅಂತಿದ್ರು. ನಾವು ಯಾರನ್ನೂ ಕನ್ವರ್ಟ್ ಮಾಡೋಕೆ ಹೋಗೋಲ್ಲ ಅಂತೀವಲ್ಲ. ಉದಾಹರಣೆಗೆ ಕ್ರಿಶ್ಚಿಯನ್ನರು ಕನ್ವರ್ಟ್‌ಮಾಡ್ತಾರೆ, ಮುಸ್ಲಿಮರು ಮಾಡ್ತಾರೆ.. ಹಾಗೆ. ಅದಕ್ಕೆ ತೇಜಸ್ವಿ ಹೇಳ್ತಾ ಇದ್ರು, 'ನಾವು ಕನ್ವರ್ಟ್‌ಮಾಡೋಕ್ಕಾಗಲ್ಲ, ಯಾವ ಜಾತಿಗೆ ಮಾಡ್ತೀರಿ?' ಅಂತಿದ್ರು. ಈ ರೀತಿ ನೋಡೋನು ಕಮ್ಯುನಲ್ ಆಗೋದು ಸಾಧ್ಯವಿಲ್ಲ. ಇಲ್ಲಿ ಜಾತಿ ವ್ಯವಸ್ಥೆ ಹೋಗ್ಬೇಕಾದ್ರೆ ಅಂತರ್ಜಾತೀಯ ವಿವಾಹ ಆಗ್ಬೇಕು, ಅವರಿಗೆ ಮೀಸಲಾತಿ ನೀಡಬೇಕು ಎಂದು ಅವರು ಹೇಳುತ್ತಿದ್ದರು.

ವಿಕೇಂದ್ರೀಕರಣ, ಪರಿಸರದ ಬಗ್ಗೆ ವಿಶೇಷ ಆಸಕ್ತಿ ಇತ್ತು. ಒಂದು ಸಣ್ಣ ತೊರೆಯನ್ನು ಹುಡುಕುತ್ತಾ ಹೋದರೆ ಅದು ಎಷ್ಟು ವಿಸ್ಮಯ ತರುತ್ತೆ ಅಂದ್ರೆ ಬ್ರಹ್ಮನನ್ನೇ ಹುಡುಕಿದಷ್ಟು ವಿಸ್ಮಯ ಎನ್ನುತ್ತಿದ್ದರು. ಅದಕ್ಕಾಗಿ ಯಾವ ದೇವಸ್ಥಾನಕ್ಕೂ ಹೋಗಬೇಕಾಗಿರಲಿಲ್ಲ. ಅವರಲ್ಲಿ ಒಂದು ತಾತ್ವಿಕವಾದ ಹುಡುಕಾಟ ಇತ್ತು. ವ್ಯಕ್ತಿ ವಿಶಿಷ್ಟ ಸಿದ್ಧಾಂತದ ನೆಲೆಯಿಂದ ಅವರು ಹೊರಬಂದ್ರು. ಅವರು ಎಲ್ಲಾ ಸ್ಥಿತಿಗಳಿಂದ ಹಾದು ಹೋದವರು.

ಟಿ.ವಿ. ಗಿವಿ, ಹೊಸ ಚಾನಲ್ ಬರ್ತಿದೆಯಲ್ಲಾ, ಓದೋದು ಎಲ್ಲಾ ಕಡಿಮೆಯಾಗ್ತಿದೆಯಲ್ಲಾ ಅಂತ ಕೇಳಿದ್ರೆ, ಆಗ್ಲಿ ಬಿಡಿ. ಜಾತಿ-ಗೀತಿ ಎಲ್ಲಾ ಹೊರಟು ಹೋಗುತ್ತೆ' ಅಂದ್ರು. ಕೆಲವೊಮ್ಮೆ ಒಪ್ಪಿಕೊಳ್ಳಬಲ್ಲ ಉತ್ತರ ಕೊಡ್ತಾ ಇದ್ರು. ಅವರ ಮನಸ್ಸು ಯಾವಾಗ್ಲೂ ಹೊಸದನ್ನು ಚಿಂತಿಸುತ್ತಿತ್ತು. ಯಾರನ್ನೂ ದ್ವೇಷಿಸುತ್ತಿರಲಿಲ್ಲ. ಯಾರೊಂದಿಗೂ ಮಾತು ಬಿಟ್ಟೋರಲ್ಲ. ಅವರ ಸೆನ್ಸಿಬಿಲಿಟಿ ವಿಶೇಷವಾದ್ದು. ಇದು ಅವರಿಗೂ ಎಂ.ಡಿ.ನಂಜುಂಡಸ್ವಾಮಿ ಅವರಿಗೂ ಇದ್ದ ವ್ಯತ್ಯಾಸ. ಎಂಡಿ.ಎನ್. ಹಠವಾದಿ, ಮಹಾ ಹೋರಾಟಗಾರ. ನಂಜುಂಡಸ್ವಾಮಿ ಸೆನ್ಸಿಬಿಲಿಟಿಗೆ ಇವರದು ವಿರುದ್ಧವಾದದ್ದು. ಆದರೆ ಎಂ.ಡಿ.ಎನ್ ಇಲ್ಲದ ಜಗತ್ತಿನಲ್ಲಿ ನಾನು ಇರಬಲ್ಲೆ. ತೇಜಸ್ವಿ ಇಲ್ಲದ ಜಗತ್ತಿನಲ್ಲಿ ನಾನು ಇರಲಾರೆ.

(ಕನ್ನಡಪ್ರಭ ಪ್ರತಿನಿಧಿಗಳಾದ ವಿದ್ಯಾರಶ್ಮಿ, ಮಂಜುನಾಥ ಸಿ. ಅವರಿಗೆ ಹೇಳಿದಂತೆ)

ಕಾಡಿನ ಸಂತನ ನಿಗೂಢ ಜಗತ್ತು

ಭಾರವಿಲ್ಲದ ಭಾಷೆ, ಅನುಭಾವವಿಲ್ಲದ ಭಾವ, ತಡವಿ ಸಂತೈಸುವ ಶೈಲಿ, ಆಪ್ತವಾಗುವ ಸನ್ನಿವೇಶಗಳ ಮೂಲಕ ಅಪರೂಪದ ಕತೆಗಳನ್ನು ಕಟ್ಟಿಕೊಟ್ಟು ಕನ್ನಡ ಸಾಹಿತ್ಯ ಲೋಕದ ಸಾಧ್ಯತೆಗಳನ್ನು ವಿಸ್ತರಿಸಿದವರು ಪೂರ್ಣಚಂದ್ರತೇಜಸ್ವಿ. ಅವರು ಸಾಹಿತ್ಯದ ಜಗತ್ತಿನ ನ್ಯಾಷನಲ್ ಜಿಯಾಗ್ರಾಫಿಕ್ ಚಾನಲ್ಲು. ನಾವು ನೋಡದೇ ಇದ್ದ ನಮ್ಮ ಕಾಡುಗಳನ್ನು ನಮಗೆ ತೋರಿಸಿಕೊಟ್ಟವರು ತೇಜಸ್ವಿ. 'ಕರ್ವಾಲೋ' ಕಾದಂಬರಿ ಓದುತ್ತಿದ್ದರೆ ನಮಗೆ ಸಹ್ಯಾದ್ರಿಯ ದಟ್ಟ ಕಾನನ ಕಣ್ಣ ಮುಂದೆ ನಿಲ್ಲುತ್ತದೆ. ಆ ಕಾಡಿನೊಳಗಿನ ನಿಗೂಢ ಜಗತ್ತು ತೆರೆದುಕೊಳ್ಳುತ್ತದೆ. ನಾವು ಮೌನಿಯಾಗುತ್ತೇವೆ. ಕಾಡು ಮಾತಾಡುತ್ತದೆ.

ಒಂದು ಅಪೂರ್ವ ಸನ್ನಿವೇಶದಲ್ಲಿ ಪೂರ್ಣಚಂದ್ರ ತೇಜಸ್ವಿ ಕನ್ನಡ ಸಾಹಿತ್ಯ ಜಗತ್ತನ್ನು ಪ್ರವೇಶಿಸಿದರು. ಅದು ನವ್ಯ ಸಾಹಿತ್ಯ ಒಳಗಡಿ ಇಡುತ್ತಿದ್ದ ಕಾಲ. ತೇಜಸ್ವಿಯವರ ಮುಂದೆ ಧಿಕ್ಕರಿಸಲಾರದ ಸಿದ್ಧಮಾದರಿಗಳಿದ್ದವು.
ಯಾವುದೇ ಅನುಮಾನಗಳಿಲ್ಲದೇ ಒಪ್ಪಿಕೊಳ್ಳಬಹುದಾದ ರಚನೆಗಳಿದ್ದವು. ಅವೆಲ್ಲವನ್ನು ಧಿಕ್ಕರಿಸಿ ಹೊಸ ಹಾದಿಯನ್ನು ಹಿಡಿದು ನಡೆಯುತ್ತೇನೆ ಎಂದು ಹೊರಟು ನಿಂತವರು ತೇಜಸ್ವಿ. ಅವರ ಈ ನಿಲುವು ಬರಹದಲ್ಲಷ್ಟೇ ಅಲ್ಲ, ಬದುಕಿನಲ್ಲೂ ವ್ಯಕ್ತಗೊಂಡಿತು. ಕೃಷಿಯನ್ನು ಆವರಿಸಿಕೊಂಡರು ತೇಜಸ್ವಿ. ಸಾಹಿತ್ಯ ಕೃಷಿ ಭಾವಕ್ಷೇತ್ರಕ್ಕೆ, ಸಹಜ ಕೃಷಿ ಜೀವಕ್ಷೇತ್ರಕ್ಕೆ.

ತೇಜಸ್ವಿಯವರ ಆಸಕ್ತಿಗಳ ಜಗತ್ತು ಬಹು ವಿಸ್ತಾರ. ಕುತೂಹಲ ಹುಟ್ಟಿಸುವ ಯಾವ ಸಂಗತಿಯೂ ಅವರ ಕಣ್ನೋಟದಿಂದ ತಪ್ಪಿಸಿಕೊಳ್ಳಲಿಲ್ಲ. ವಿಜ್ಞಾನ, ಪರಿಸರ, ಜೀವಜಗತ್ತು, ಮನುಷ್ಯನ ಪಾಡು, ರಾಜಕಾರಣದ ಕಬಂಧ ಬಾಹು, ಜಾತಿಕಲಹ, ನಯವಂಚನೆ, ಮಾನವತೆ, ಇವೆಲ್ಲದರಿಂದ ಪಾರಾಗುವ ಮಾರ್ಗ ಎಲ್ಲವನ್ನೂ ಅವರು ತಮ್ಮ ಕೃತಿಗಳಲ್ಲಿ ತಂದರು. ಮೂಡಿಗೆರೆ ಅವರ ಕಾರ್ಯಕ್ಷೇತ್ರವಾಯಿತು. ಹೆಗ್ಗೋಡು ಎಂಬ ಪುಟ್ಟ ಹಳ್ಳಿ, ಕೆ.ವಿ. ಸುಬ್ಬಣ್ಣನವರ ಕೈಲಿ ಜಗತ್ತಿನ ಪ್ರತಿಬಿಂಬವಾದಂತೆ ಮೂಡಿಗೆರೆ ಎಂಬ ಪುಟ್ಟೂರಲ್ಲಿ ಇದ್ದುಕೊಂಡೇ ತೇಜಸ್ವಿ ಮನುಕುಲದ ಕತೆ ಹೇಳಿದರು.

ಮಹಾನಗರದ ತಲ್ಲಣಗಳನ್ನು ನಿರಾಕರಿಸುತ್ತಾ ಜಾಗತೀಕರಣದ ಹಿಡಿತದಿಂದ ಭಾರತ ಪಾರಾಗಬೇಕಾದ ಅಗತ್ಯವನ್ನು ತಮ್ಮ ಕೃತಿಗಳ ಮೂಲಕ ಸಾರುತ್ತಾ ತಮ್ಮ ದಿಟ್ಟ ನಿಲುವನ್ನು ವ್ಯಕ್ತಪಡಿಸುತ್ತಾ, ವಿಚಾರವಾದವನ್ನೂ ಆಪ್ತವಾಗುವ ಶೈಲಿಯಲ್ಲಿ ಹೇಳಿದವರು ಅವರು. ಅವರ ಕಾದಂಬರಿಗಳಲ್ಲಿ ರೂಪಕ ಜಗತ್ತಿಲ್ಲ. ದೈನಂದಿನ ವಿವರಗಳಲ್ಲೇ ಅವರು ದೊಡ್ಡ ಸತ್ಯವನ್ನು ಹೇಳಿದರು. ಸೂರ್ಯಾಸ್ತ ನೋಡುತ್ತಾ ನಿಂತ ತಬರಶೆಟ್ಟಿಗೆ ಹುಚ್ಚುಹಿಡಿದಿದೆ ಅನ್ನುತ್ತಲೇ ಆತನಿಗೆ ಹುಚ್ಚು ಹಿಡಿಸಿದ್ದು ಸ್ವತಂತ್ರ ಭಾರತದ ಅಧಿಕಾರಶಾಹಿ ವ್ಯವಸ್ಥೆ ಎನ್ನುವುದನ್ನು ತೋರಿಸಿಕೊಟ್ಟರು.

ಅಬಚೂರಿನ ಪೋಸ್ಟಾಫೀಸು ಕಥಾ ಸಂಕಲನದ ಮುನ್ನುಡಿಯಲ್ಲಿ ಅವರು

ಬದಲಾಗುತ್ತಿರುವ ಸನ್ನಿವೇಶಗಳ ಸವಾಲುಗಳನ್ನು ಎದುರಿಸಲು ಹೊಸದಿಗಂತದತ್ತ ಹೆಜ್ಜೆ ಹಾಕಬೇಕಾಗಿರುವ ಅನಿವಾರ್ಯದ ಕುರಿತು ಹೇಳಿದ್ದರು. ನಲವತ್ತು ವರುಷಗಳ ನಂತರ ಮತ್ತೇ ಅಂಥದ್ದೇ ಅಗತ್ಯವನ್ನು ಅವರು 'ಮಾಯಾಲೋಕ' ಕೃತಿಯ ಮೂಲಕ ನೆನಪಿಸಿಕೊಟ್ಟರು. ಬದಲಾವಣೆಯ ಮಹಾಪುರದ ಎದುರು ತಬ್ಬಲಿಯಾಗಿ ನಿಂತ ಮಾನವನ ಪಾಡು ಅವರಿಗೆ ಇಷ್ಟದ ಕಥಾವಸ್ತು. ಅದನ್ನು ಅವರು ತಿಳಿಹಾಸ್ಯದ ಮೂಲಕ ಹೇಳುತ್ತಾರೆ. ಹಾಗಾಗಿಯೇ ಅವರ ಪ್ರತಿಯೊಂದು ಕೃತಿಗೂ ಅನೇಕ ಸ್ತರಗಳು, ಅಸಂಖ್ಯ ಆಯಾಮಗಳು. ಹೊಳೆದದ್ದು ತಾರೆ, ಉಳಿದದ್ದು ಆಕಾಶ.

ಕನ್ನಡ ಸಾಹಿತ್ಯದಲ್ಲಿ ಕಾಡು ಮೂರು ರೀತಿಗಳಲ್ಲಿ ವ್ಯಕ್ತವಾಗಿದೆ. ಮೊದಲನೆಯದು ಕುವೆಂಪು ಅವರು ಕಂಡ ದಟ್ಟ ಕಾಡು. ನಂತರದ್ದು ಕಾರಂತರು ಕಂಡ ಮಾನವನ ಅಭಿವೃದ್ಧಿಗೆ ಸವಾಲಾದ ಕಾಡು. ಮೂರನೆಯದು ತೇಜಸ್ವಿಯವರು ಕಾಣುತ್ತಿರುವ ಕ್ರಮೇಣ ಮರೆಯಾಗುತ್ತಿರುವ ಕಾಡು. ಕುವೆಂಪು ಅವರ ಕಾಲಕ್ಕೆ ನಿಬಿಡವಾಗಿದ್ದ ಕಾಡು, ತೇಜಸ್ವಿಯವರ ಕಾಲಕ್ಕೆ ಬೋಳು ಬಯಲು. ಈ ದುರಂತವನ್ನೇ ಅವರು ಹೇಳಿದ್ದು. ಚಿದಂಬರ ರಹಸ್ಯವಾಗಲೀ, ಕರ್ವಾಲೋ ಆಗಲಿ ಅವರ ಕಾಳಜಿ ಅದೊಂದೇ.

ವ್ಯಕ್ತಿಯ ವಿಶಿಷ್ಟ ಯೋಚನಾಲಹರಿ, ನಿಲುವು ಮತ್ತು ಆಲೋಚನಾ ಕ್ರಮದಲ್ಲಿ ಅಪಾರ ನಂಬಿಕೆ ಇಟ್ಟುಕೊಂಡಿದ್ದವರು ತೇಜಸ್ವಿ, ಅವರ 'ವ್ಯಕ್ತಿ ವಿಶಿಷ್ಟ ಸಿದ್ಧಾಂತ'ದಲ್ಲಿ ಕಾಣಿಸುವುದು ಅದೇ ಹುಡುಕಾಟ. ಅದು ಕೆನತ್ ಅಂಡರ್‌ಸನ್ ಅಥವಾ ಜಿಮ್ ಕಾರ್ಬೆಟ್ ಕೃತಿಗಳ ಅನುವಾದವಾಗಲೀ ಅವರೇ ಬರೆದ ಪರಿಸರದ ಕಥೆಗಳಾಗಲೀ ಅಲ್ಲಿ ಕಾಣಿಸುವುದು ನಿಗೂಢ ಜಗತ್ತು. ಆ ಜಗತ್ತಿನ ನಿಗೂಢ ಮನುಷ್ಯರ ಸ್ವರೂಪದ ಬಗ್ಗೆ ಅವರ ಕಾಳಜಿ.

ಅನೇಕ ಸಾಹಿತಿಗಳ ಹಾಗೆ ತೇಜಸ್ವಿ ಕೇವಲ ಫಿಕ್ಷನ್‌ಗಷ್ಟೇ ತಮ್ಮನ್ನು ಮಿತಿಗೊಳಿಸಿಕೊಳ್ಳಲಿಲ್ಲ. ನಾಗರೀಕತೆಯ ಕುರುಹುಗಳನ್ನು ಹುಡುಕುತ್ತಾ ಹೊರಟರು. ನೈಲ್ ನದಿಯುದ್ದಕ್ಕೂ ಓಡಾಡಿದರು. ಅಂಡಮಾನ್‌ನಲ್ಲಿ ಅಲೆಮಾರಿಯಾದರು. ಮಿಲೇನಿಯಂ ಸರಣಿಯಲ್ಲಿ ಮಹಾಯುದ್ಧದ ಬಗ್ಗೆ ಬರೆದರು. ದೇಶ ವಿದೇಶ ಮಾಲಿಕೆಯಲ್ಲಿ ಜಗತ್ತಿನ ನಾಗರೀಕತೆಯನ್ನು ತಂದು ನಮ್ಮ ಮುಂದೆ ಹರವಿದರು. ಪೆಸಿಫಿಕ್ ದ್ವೀಪಗಳ ಅನಾಗರೀಕ ಜಗತ್ತಿನ ಚಿತ್ರಣವನ್ನು ಕಣ್ಮುಂದೆ ಕಟ್ಟಿಟ್ಟರು. ಪಕ್ಷಿಕಾಶಿಯನ್ನು ಕುವೆಂಪು ಮೆಚ್ಚಿಕೊಂಡರೆ ತೇಜಸ್ವಿ ಹಕ್ಕಿಗಳ ಜಗತ್ತಿನೊಳಗೆ ಕಾಲಿಟ್ಟು ಅವುಗಳ ಬದುಕನ್ನೂ ದಾಖಲಿಸಿದರು.

ಜೀವ ವಿಜ್ಞಾನಿ ನಿಜವಾದ ಅರ್ಥದಲ್ಲಿ ಪರಿಸರ ಪ್ರೇಮಿ, ಸರಿಯಾದ ಅರ್ಥದಲ್ಲಿ ಗಾಂಧೀವಾದಿ, ಸರಳ ಶೈಲಿಯ ಕಥೆಗಾರ, ಜನಪ್ರೀತಿಯ ಸಾಹಿತಿ, ಮರೆಯಲಾಗದ ಮನುಷ್ಯ–ಎಲ್ಲವೂ ಆಗಿದ್ದ ಕಾಡಿನ ಸಂತ ತೇಜಸ್ವಿ, ಅವರ ಕಣ್ಮರೆಯೊಂದಿಗೆ ಕನ್ನಡದ ಬಹುಮುಖ್ಯ ಪರಂಪರೆಯ ಕೊಂಡಿ ಕಳಚಿಕೊಂಡಿದೆ.

ಕಾಡು ಬೋಳಾಗಿದೆ. (ಸಾಭಾರ : ಕನ್ನಡಪ್ರಭ ಸಂಪಾದಕೀಯ)

ವಿಶಿಷ್ಟ ತೇಜಸ್ಸು

ಅವರು ಕನ್ನಡದ ಮನಸ್ಸಿಗೆ ನಿಸರ್ಗದ ಕೌತುಕ ತೋರಿಸಿದವರು

ಅತ್ಯಂತ ಪ್ರತಿಭಾವಂತ. ಸದಾ ಬದಲಾವಣೆಗೆ ತೆರೆದುಕೊಂಡ ಮನಸು. ಯಾವುದೇ ತಂತ್ರಜ್ಞಾನ ಅಭಿವೃದ್ಧಿಯಾಗಲಿ, ಅದನ್ನು ಅಳವಡಿಸಿಕೊಂಡ ಅಪರೂಪದ ಸಾಹಿತಿ ಪೂರ್ಣಚಂದ್ರ ತೇಜಸ್ವಿ. ಮಕ್ಕಳಲ್ಲಿರುವ ಶಿಶು ಸಹಜ ಕುತೂಹಲವನ್ನು ತಮ್ಮ ಬದುಕಿನುದ್ದಕ್ಕೂ ಉಳಿಸಿಕೊಂಡಿದ್ದರಿಂದಲೇ ತೇಜಸ್ವಿ ಅದ್ಭುತ ಕೃತಿಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ಅರ್ಪಿಸುವುದು ಸಾಧ್ಯವಾಯಿತು. ಅವರ ಈ ಕ್ರಿಯಾಶೀಲ ಮನೋಭಾವವೇ ಅವರನ್ನು ಕನ್ನಡದ ಶ್ರೇಷ್ಠ ಸಾಹಿತಿಗಳ ಸಾಲಿನಲ್ಲಿ ನಿಲ್ಲಿಸುತ್ತದೆ. ಅವರ ವಿಶಿಷ್ಟ ಶೈಲಿಯ ಬರವಣಿಗೆ ಕನ್ನಡ ಸಾಹಿತ್ಯದಲ್ಲಿ ಹೊಸ ಶಕೆಗೆ ನಾಂದಿ ಹಾಡಿತ್ತು. ಈಗ, ತೇಜಸ್ವಿಯವರ ನಿಧನದಿಂದ ಆ ಶಕೆಗೇ ತೆರೆ ಬಿದ್ದಂತಾಗಿದೆ. ತಮ್ಮ ಕೃತಿಗಳಿಂದ ತೇಜಸ್ವಿ ಅಮರರಾದರೂ ಸದಾ ಹೊಸತನ ಹುಡುಕುವ ಅಪೂರ್ವ ಲೇಖಕನನ್ನು ಕಳೆದುಕೊಂಡಂತಹ ದುಃಖ, ಕನ್ನಡ ಸಾಹಿತ್ಯ ಲೋಕಕ್ಕೆ.

ರಾಷ್ಟ್ರಕವಿ ಕುವೆಂಪು ಪುತ್ರ ತೇಜಸ್ವಿ. ಆದರೂ ಬಹುಬೇಗನೆ ತಮ್ಮ ತಂದೆಯ ನೆರಳಿನಿಂದ ಆಚೆಗೆ ಬಂದು ತಮ್ಮದೇ ಛಾಪು ಒತ್ತಿದರು. ಮೊದಲ ಕೃತಿ ಲಿಂಗಬಂದ ಪ್ರಕಟವಾದಾಗಲೇ ಹೊಸ ಶೈಲಿಯ ಲೇಖಕನ ಉದಯವೂ ಆಯಿತು. ಬಾಲಕನೊಬ್ಬನ ದೃಷ್ಟಿಯಲ್ಲಿ ವರ್ಷಧಾರೆಯ ಪಶ್ಚಿಮ ಘಟ್ಟದ ನೋಟವನ್ನೂ ಬಿಂಬಿಸುವ ಕಥೆ ತೇಜಸ್ವಿಯವರ ಸಾಹಿತ್ಯ ಬದುಕಿನ ದಿಕ್ಸೂಚಿಯನ್ನು ನೀಡಿತು. ಪ್ರಕೃತಿ ಮತ್ತು ಪ್ರಕೃತಿ ಸಂಬಂಧಿತ ಘಟನೆಗಳು ಅವರ ಬಹತೇಕ ಕೃತಿಗಳಲ್ಲಿ ಪ್ರಮುಖ ಪಾತ್ರಗಳಾಗಿವೆ. ಈ ಪ್ರಕೃತಿ–ಪರಿಸರದಲ್ಲಿನ ಅಪಾರ ಆಸಕ್ತಿಯೇ ಅವರನ್ನು ಮೂಡಿಗೆರೆಗೆ ಒಯ್ದದ್ದು. ಸಾಹಿತ್ಯ ಕೃಷಿ ಹಾಗೂ ವ್ಯವಸಾಯ ಎರಡಕ್ಕೂ ಅದು ಪ್ರಯೋಗ ಭೂಮಿ ಕೂಡಾ ಆಯಿತು. ಜನಜೀವನದೊಂದಿಗೆ ಬದುಕು ಬೆರೆಯಿತು. ಚಿತ್ರಕಲೆ, ಛಾಯಾಗ್ರಹಣ ಮತ್ತು ತಂತ್ರಜ್ಞಾನ ಕೂಡ ತೇಜಸ್ವಿಯವರ ಮನಸೆಳದ ಕ್ಷೇತ್ರಗಳು. ಅಲ್ಲಿಯೂ ಪ್ರಬುದ್ಧತೆ ಮೆರೆದದ್ದು ಅವರ ಪ್ರತಿಭೆಗೊಂದು ನಿದರ್ಶನ.

ತೇಜಸ್ವಿಯವರಿಗೆ ಸಾಹಿತ್ಯದಲ್ಲಿ ಆಸಕ್ತಿ ಉಂಟಾಗಲು ಮನೆ ಪರಿಸರ ಕಾರಣ ಎಂಬುದು ಒಪ್ಪತಕ್ಕದ್ದೇ. ಕುವೆಂಪು ಪುತ್ರರಾಗಿ ಅವರ ಜತೆ ಸಾಹಿತ್ಯ ಸಂವಾದ ಕೂಡ ಅವರ ಬೆಳವಣಿಗೆಗೆ ನೀರೆರದು ಪೋಷಿಸಿದೆ. ಆದರೆ ಅದನ್ನು ಮೀರಿದ ಕೆಲ ಪ್ರಭಾವಗಳು ತನ್ನ ಮೇಲೆ ಆಗಿವೆ ಎಂದು ತೇಜಸ್ವಿ ಅನೇಕ ಬಾರಿ

ಹೇಳಿಕೊಂಡಿದ್ದಾರೆ. ಲೋಹಿಯಾ ತತ್ವ ಚಿಂತನೆ, ಕುವೆಂಪು ಕಲಾ ಸೃಷ್ಟಿ ಹಾಗೂ ಶಿವರಾಮ ಕಾರಂತರ ಜೀವನ ಪ್ರಯೋಗಶೀಲತೆ ಹಾಗೂ ಸಾಹಸಪ್ರಿಯತೆ ಅವರ ಬದುಕಿನ ಮೇಲೆ ಗಾಢ ಪ್ರಭಾವ ಬೀರಿದ್ದವು. ತನ್ಮೂಲಕ ಅವು ಬರವಣಿಗೆಯ ಮೇಲೂ ಪ್ರಭಾವ ಬೀರಿದರೂ ತಮ್ಮದೇ ಶೈಲಿ ರೂಢಿಸಿಕೊಂಡು ವೈವಿಧ್ಯಮಯ ಸಾಹಿತ್ಯ ಕೃತಿಗಳನ್ನು ನೀಡಿದರು. ವಿಜ್ಞಾನ ಸೇರಿದಂತೆ ಅನೇಕ ಶಾಖೆಗಳಲ್ಲಿ ಪ್ರಾವೀಣ್ಯ ಪಡೆದು, ಗಂಭೀರವಾಗಿ, ಸರಳವಾಗಿ ಬರೆದ ತೇಜಸ್ವಿ ನವೋದಯ, ನವ್ಯ-ನವ್ಯೋತ್ತರ ಕಾಲಘಟ್ಟಗಳ ನಡುವೆ ತಮ್ಮದೇ ವಿಶಿಷ್ಟ ಅಭಿವ್ಯಕ್ತಿ ವಿಧಾನ ರೂಪಿಸಿಕೊಂಡವರು. ದಲಿತ ಬಂಡಾಯದ ಸಾಮಾಜಿಕ ಕಳಕಳಿಯನ್ನು ಅವರ ಕೃತಿಗಳಲ್ಲಿ ಕಾಣಬಹುದಾಗಿದೆ. ವಿಜ್ಞಾನಿಯ ವೈಚಾರಿಕತೆ ಹಾಗೂ ಖಚಿತತೆ, ಹಾಸ್ಯ ಪ್ರಜ್ಞೆ, ವೈಚಾರಿಕ ಬರಹ, ಕಥೆ ಹೇಳುವ ಶೈಲಿ ಓದುಗರನ್ನು ಪೂರ್ಣವಾಗಿ ತನ್ಮಯಗೊಳಿಸಿಬಿಡುತ್ತದೆ. ಅವರ ಕಥೆ, ಕಾದಂಬರಿ, ಕಾವ್ಯ, ನಾಟಕ, ಪ್ರವಾಸ ಕಥನ, ಅನುವಾದ, ಪ್ರಾಣಿ ಪಕ್ಷಿ ಕುರಿತ ನುಡಿ ಚಿತ್ರಗಳು ತಮ್ಮದೇ ವೈಶಿಷ್ಟ್ಯ ಮೆರೆದಿವೆ. ಬಹುಷಃ ವಿಜ್ಞಾನವನ್ನಂತೂ ಅವರಷ್ಟು ಸರಳವಾಗಿ ಯಾರೂ ಬರೆದಿರಲಾರರು. ತಬರನ ಕಥೆ ಜನಮಾನಸದಲ್ಲಿ ಮೂಡಿಸಿದ ಛಾಪು ವರ್ಣನಾತೀತ. ಇಂದಿಗೂ ಅಧಿಕಾರಶಾಹಿಯ ವಿಳಂಬ ನೀತಿಯನ್ನು, ಸೂಕ್ಷ್ಮ ಘಟನೆಗಳನ್ನು ತಬರನ ಕಥೆಗೆ ಹೋಲಿಸುವುದುಂಟು.

ತಮ್ಮ ವಿಚಾರಧಾರೆ ವೈಚಾರಿಕ ಪ್ರಜ್ಞೆಯಿಂದ ವಿಶೇಷವಾಗಿ ಎದ್ದು ಕಾಣುವ ವ್ಯಕ್ತಿತ್ವದ ತೇಜಸ್ವಿ ವಿವಾದದ ಸುಳಿಗೂ ಸಿಕ್ಕಿದ್ದುಂಟು. ಜಾಗತೀಕರಣದ ವಿಷಯದಲ್ಲಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದಾಗ ಅವರನ್ನು 'ಜನವಿರೋಧಿ' ಎಂದು ಕರೆದವರೂ ಇದ್ದರು. ಆದರೆ ತೇಜಸ್ವಿ ಜಾಗತೀಕರಣದ ಅನಿವಾರ್ಯತೆ ಬಗೆಗೆ ಪ್ರಸ್ತಾಪಿಸಿದ್ದರಷ್ಟೆ.

ಈ ಉದಾರೀಕರಣ ನೀತಿಯು ಜನಜೀವನವನ್ನು ಸುಧಾರಿಸಬೇಕೇ ವಿನಃ ಅದನ್ನು ಹಾಳುಗೆಡವಬಾರದೆಂಬುದು ಅವರ ಮಾತಿನ ಅರ್ಥವಾಗಿತ್ತು. ಪ್ರಕೃತಿ ಪರಿಸರ, ಮಾನವ ಸಂಬಂಧ, ಜನರ ಜಂಜಾಟದ ಬಗೆಗೆ ಬರೆದ ತೇಜಸ್ವಿ ಅದ್ಭುತ ಮಾನವತಾವಾದಿ.

(ಸಾಭಾರ : ವಿಜಯ ಕರ್ನಾಟಕ ಸಂಪಾದಕೀಯ)

***

ಅಪೂರ್ವ ಪ್ರತಿಭೆ

ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರು ಕನ್ನಡ ಸಾರಸ್ವತ ಲೋಕದ ಅಪೂರ್ವ ಪ್ರತಿಭೆ. ಸದಾ ಹೊಸತನದ ಅನ್ವೇಷಣೆಯಲ್ಲಿ ತೊಡಗಿ ಹೊಸ ರೀತಿಯ ಸಾಹಿತ್ಯ ಸೃಷ್ಟಿಸಿದ ಅಪರೂಪದ ಲೇಖಕ. ರಾಮಮನೋಹರ ಲೋಹಿಯಾ ಅವರ ಸಮಾಜವಾದಿ ಸಿದ್ಧಾಂತ, ತಂದೆ ಕುವೆಂಪು ಅವರ ಸೃಜನಶೀಲತೆ ಮತ್ತು ಶಿವರಾಮ ಕಾರಂತರ ಪ್ರಯೋಗಶೀಲತೆಗಳ ಮಿಲನವನ್ನು ತೇಜಸ್ವಿ ಅವರ ಕೃತಿಗಳಲ್ಲಿ ಕಾಣಬಹುದು. ಜೀವನದ ಕಠೋರ ಸತ್ಯವನ್ನು ವಿಸ್ಮಯದಿಂದ ನೋಡುವ ಅವರ ದೃಷ್ಟಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿಯೇ ವಿಶಿಷ್ಟವಾದುದು. ಮೂಢ ನಂಬಿಕೆ, ಆಷಾಢಾಭೂತಿ ನಡವಳಿಕೆ, ಶೋಷಣೆ ಮತ್ತು ಸಭ್ಯತೆಯ ಸೋಗನ್ನು ಅವರು ಎಂದೂ ಸಹಿಸಿದವರಲ್ಲ. ನಮ್ಮ ಸಂಸ್ಕೃತಿ ಮತ್ತು ಪರಿಸರವನ್ನು ವಿಕೃತಗೊಳಿಸುತ್ತಿರುವ ಸಾಮಾಜಿಕ, ರಾಜಕೀಯ ಭ್ರಷ್ಟ ವ್ಯವಸ್ಥೆಯ ವಿರುದ್ಧ ಸದಾ ದನಿ ಎತ್ತುತ್ತ ಬಂದಿದ್ದರು. ಭ್ರಷ್ಟ ವ್ಯವಸ್ಥೆಯ ವಿರುದ್ಧ ಅವರೆಂದೂ ರಾಜಿ ಮಾಡಿಕೊಳ್ಳಲಿಲ್ಲ. ಜನಜಾಗೃತಿ ಸಮಾಜದ ಆಂತರ್ಯದಲ್ಲಿ ಹುಟ್ಟದಿದ್ದರೆ ಈ ಭ್ರಷ್ಟ ವ್ಯವಸ್ಥೆಯನ್ನು ಬದಲಿಸುವುದು ಕಷ್ಟ ಎಂದು ಅವರು ಹೇಳುತ್ತಿದ್ದರು. ಸಾಹಿತ್ಯಕ್ಕಿಂತ ಜೀವನ ದೊಡ್ಡದು ಎಂದು ತಿಳಿದಿದ್ದ ಅವರು ಕೃಷಿಕರಾಗಿ ಜೀವನ ಸಾಗಿಸಿದರು. ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆಯ ಬಳಿ ಕಾಫಿ ತೋಟವೊಂದನ್ನು ಮಾಡಿಕೊಂಡು ಪ್ರಾಣಿ, ಪಕ್ಷಿಗಳ ಜೀವನವನ್ನು ಅಧ್ಯಯನ ಮಾಡುತ್ತಾ, ಅವುಗಳನ್ನು ಕ್ಯಾಮರಾದಲ್ಲಿ ಸೆರೆಹಿಡಿಯುತ್ತ, ಅನುಭವವನ್ನು ಬರಹದಲ್ಲಿ ಮೂಡಿಸಿದ ತೇಜಸ್ವಿ ಕನ್ನಡಿಗರಿಗೆ ಹೊಸ ವಿಸ್ಮಯ ಲೋಕವನ್ನೇ ತೆರೆದಿಟ್ಟಿದ್ದಾರೆ.

ಕುವೆಂಪು ಅವರಂತೆಯೇ ತೇಜಸ್ವಿ ಅವರು ಕನ್ನಡ ಸಾಹಿತ್ಯ ಕ್ಷೇತ್ರವನ್ನು ಸಮೃದ್ಧಗೊಳಿಸಿದ್ದಾರೆ. ತೇಜಸ್ವಿ ಅವರು ನವ್ಯ ಸಾಹಿತ್ಯ ಗಟ್ಟಿಯಾಗಿ ನೆಲೆಯೂರಿದ್ದ ಕಾಲದಲ್ಲಿ ಬರವಣಿಗೆ ಆರಂಭಿಸಿದರೂ ನವ್ಯದ ಸಂಕೀರ್ಣತೆ ಅವರ ಮೇಲೆ ಪ್ರಭಾವ ಬೀರಲಿಲ್ಲ. ನವ್ಯರಿಗಿಂತಾ ಭಿನ್ನವಾಗಿ ಬರೆದರು. ಸರಳ ಭಾಷೆ, ನವಿರಾದ ಹಾಸ್ಯ, ಪತ್ತೇದಾರಿ ಶೈಲಿ ಅವರ ಬರವಣಿಗೆಯ ವೈಶಿಷ್ಟ್ಯವಾಗಿತ್ತು. ಹೀಗೆಂದೇ ಅವರ ಕಾಂದಬರಿಗಳು ಕನ್ನಡ ಜನಮಾನಸದಲ್ಲಿ ಅಚ್ಚಳಿಯದೆ ಉಳಿದಿವೆ. ವ್ಯವಸ್ಥೆಯ ವಿರುದ್ಧದ ಬಹುಪಾಲು ಚಳವಳಿಗಳಲ್ಲಿ ಭಾಗವಹಿಸಿದ್ದ ತೇಜಸ್ವಿ ಅವರು ದೇಶ ಸದ್ಯ ಎದುರಿಸುತ್ತಿರುವ ಕೃಷಿ ಬಿಕ್ಕಟಿನ ಬಗ್ಗೆ ಆಳವಾದ ಚಿಂತನೆ ನಡೆಸಿದ್ದರು. ರೈತರ ಸಮಸ್ಯೆಗಳು ಹಾಗೂ ಆತ್ಮಹತ್ಯೆಗಳು ಅವರನ್ನು ಕಂಗೆಡಿಸಿದ್ದವು. ಕೃಷಿ ಕ್ಷೇತ್ರದಲ್ಲಿ ಮೂಲಭೂತ ಬದಲಾವಣೆಗಳನ್ನು ಅವರು ಬಯಸಿದ್ದರು. ಉದಾರೀಕರಣ

ಅಥವಾ ಮುಕ್ತ ಆರ್ಥಿಕವಾದ ರೈತರ ಸಮಸ್ಯೆಗಳನ್ನು ನಿವಾರಿಸಲಾರವು ಎಂದು ಬಲವಾಗಿ ವಾದ ಮಾಡುತ್ತಿದ್ದ ಅವರು ಹೊಸ ಆಲೋಚನೆಗಳ ಅಗತ್ಯವಿದೆ ಎಂದು ಹೇಳುತ್ತಿದ್ದರು. ಕನ್ನಡವನ್ನು ಕಂಪ್ಯೂಟರ್‌ಗೆ ಅಳವಡಿಸುವ ವಿಚಾರದಲ್ಲಿ ಅವರು ಸಾಕಷ್ಟು ಕೆಲಸಮಾಡಿದ್ದರು. ಕನ್ನಡ ತಂತ್ರಾಂಶದ ಮೇಲಿನ ಏಕಸ್ವಾಮ್ಯವನ್ನು ವಿರೋಧಿಸುತ್ತಿದ್ದರು. ಕಂಪ್ಯೂಟರ್‌ಗೆ ಕನ್ನಡ ಭಾಷೆಯನ್ನು ಅಳವಡಿಸುವಲ್ಲಿನ ಕಷ್ಟಗಳನ್ನು ನಿವಾರಿಸುವ ದಿಸೆಯಲ್ಲಿ ಅವರು ಸಾಕಷ್ಟು ತಲೆಕೆಡಿಸಿಕೊಂಡಿದ್ದರು. ತೇಜಸ್ವಿ ನಿಧನದಿಂದ ಕನ್ನಡ ಸಾರಸ್ವತ ಲೋಕ ನಿಜವಾಗಿಯೂ ಬಡವಾಗಿದೆ ಎಂದರೆ ಉತ್ಪ್ರೇಕ್ಷೆಯಾಗಲಾರದು. (ಸಾಭಾರ : ಪ್ರಜಾವಾಣಿ ಸಂಪಾದಕೀಯ)

***

ತೇಜಸ್ವಿ ಏನೂ ಅಂದ್ರೆ.......................

ತೇಜಸ್ವಿ ಇಷ್ಟವಾಗುವುದೇ ಅದಕ್ಕೆ. ಅವರೇನು ಎಂದು ಕೇಳಿದರೆ ಏನೂ ಹೇಳಬಹುದು.ಅದಕ್ಕಿಂತಲೂ ಹೆಚ್ಚಾಗಿ ಬದುಕನ್ನು ಅತ್ಯಂತ ಉತ್ಸಾಹದಿಂದಲೇ ಸ್ವೀಕರಿಸಿದವರು. ತಮ್ಮ ಇಚ್ಛೆಯಂತೆ ಬದುಕಬೇಕೆಂದು ಅತ್ತ ನಡೆದವರು. ಹೀಗೆ ವ್ಯಾಖ್ಯಾನ ಮಾಡುತ್ತಾ ಹೋಗಬಹುದು. ಆದರೂ ಇವೆಲ್ಲದರ ಮಧ್ಯೆ ನನಗೆ ಬಹಳ ಮುಖ್ಯವಾಗಿ ತೇಜಸ್ವಿ ಏನೂ ಅಂದ್ರೆ?

ಕಷ್ಟವೆನಿಸಬಹುದಾದ ವಿಜ್ಞಾನವನ್ನು ಅತ್ಯಂತ ಸರಳವಾಗಿ ಎಲ್ಲರೆದುರು 'ವಿಜ್ಞಾನ ಅಂದ್ರೆ ಹೀಗಿದೆ' ಎಂದು ಹಿಡಿದು ತೋರಿಸಿದವರು. ವಿಜ್ಞಾನ ಬರವಣಿಗೆ ನಿಜಕ್ಕೂ ಅದ್ಭುತ. ವಿಜ್ಞಾನಿಗಳು, ಪರಿಸರ ಹೋರಾಟಗಾರರೆಲ್ಲಾ ಯಾವುದಾದರೂ ವಿಷಯದ ಬಗ್ಗೆ ಅಂಕಿ ಅಂಶ, ದೊಡ್ಡ ದೊಡ್ಡ ಬರಹಗಳನ್ನು ಹಿಡಿದು ಜನರ ಬಳಿ ಹೋದರೆ, ತೇಜಸ್ವಿ ತಮ್ಮ ಪತ್ತೇದಾರಿ ಶೈಲಿಯಲ್ಲೇ ಎಲ್ಲವನ್ನೂ ಹೇಳಿದರು. ಅದು ಜನರು ವಿಜ್ಞಾನದತ್ತ ಬರಲು ಸಾಧ್ಯವಾಯಿತು.

ಕುದುರೆಮುಖದಂಥ ಸಮಸ್ಯೆಯನ್ನು ಅತ್ಯಂತ ಸಚಿತ್ರವಾಗಿ ಸೇವಾ ಸಂಸ್ಥೆಗಳಿಗೆ, ಸರಕಾರಕ್ಕೆ ಮನದಟ್ಟು ಮಾಡಿ ಪರಿಹಾರ ಕಾಣುವಲ್ಲಿ ಪ್ರಯತ್ನಿಸಿದವರು. ಒಟ್ಟೂ ಪ್ರಕೃತಿಗೆ ತಮ್ಮನ್ನು ತೆರೆದುಕೊಂಡವರು. ಹದಿನೈದು ದಿನದ ಹಿಂದೆ ಅವರ ಮೂಡಿಗೆರೆಯ ಮನೆಯಲ್ಲಿ ಕುಳಿತು ಹರಟಿದ್ದು ಈಗ ನೆನಪಷ್ಟೇ.

ಡಿಜಿಟಲ್ ಕ್ಯಾಮೆರಾ ಬಳಕೆ ಕುರಿತು ನಡೆದ ಹರಟೆ. ಕಾಜಾಣ ಹಕ್ಕಿ ಅವರಿಗೆ ಇಷ್ಟವಾದುದು. ಜತೆಗೆ ಕುವೆಂಪು ಪುಸ್ತಕಗಳಲ್ಲಿ ಬರುವ 'ಎಂಬ್ಲಮ್' ಸಹ ಅದು. 'ನೋಡಯ್ಯಾ ಇದೊಂದು ಹಕ್ಕೀನಾ ಒಂದೇ ಪಿಕ್ಚರ್‌ನಲ್ಲಿ ಹಿಡಿಯೋದು ಅಂದ್ರೇ ಕಷ್ಟ ಅದಕ್ಕೇ ನೋಡು, ಎರಡು ಪಿಕ್ಚರ್ ತೆಗೆದು ಒಂದೇ ಮಾಡಿದ್ದೇನೆ' ಎಂದರು.

ಕೆಲ ತಿಂಗಳ ಹಿಂದೆ ಕುಪ್ಪಳಿಯಲ್ಲೊಂದು ಸಂವಾದವಿತ್ತು. ಒಬ್ಬರು 'ಕಾಡಿನಲ್ಲೇ ಇದ್ದವರ ಸಂಸ್ಕೃತಿ ನಾಶ ಮಾಡೋದು ತಪ್ಪಲ್ವಾ? ಅದನ್ನು ಸ್ಥಳಾಂತರಿಸೋದು ಸರಿಯೇ?' ಎಂದರು.

ಅದಕ್ಕೆ ಅವರ ಉತ್ತರ 'ಭದ್ರಾ ಹುಲಿ ಅಭಯಾರಣ್ಯಕ್ಕೆ ಸಂಬಂಧಿಸಿದಂತೆ ಬಹಳಷ್ಟು ಮಂದಿಗೆ ಪುನರ್ವಸತಿ ಕಲ್ಪಿಸಲಾಗಿದೆ. ಈಗ ಅವರಿಗೆಲ್ಲಾ ದುಡ್ಡು ಕೊಡ್ತೀವಿ ಮತ್ತೇ ಕಾಡಿಗೆ ಹೋಗ್ರಿ ಅಂದರೆ ಹೊಡೆಯಲಿಕ್ಕೆ ಬಂದಾರು. ರ್ರೀ, ಅವರ ಬದುಕು ಅವರ ಇಷ್ಟದ ಹಾಗೆ ನಡೆಯಬೇಕು. ನೀವ್ಯಾರ್ರೀ ಅದನ್ನ ನಿರ್ಧರಿಸೋರು?'

ಆಗ ನಮಗೆ ಮೀನು ಹಿಡಿಯೋದು ಟೈಮ್ ಪಾಸ್. ಅವರಿಗೆ ಅದೊಂದು ಕ್ರೀಡೆ ಮತ್ತು ಜ್ಞಾನ. ತೇಜಸ್ವಿ ಯಾವುದೋ ಮೀನುಗಾರಿಕೆ ಅಧಿಕಾರಿಯನ್ನು ಹಿಡಿದು 'ಏನ್ರೀ ಹೇಳ್ರೀ, ಮೀನಿನ ಬಗ್ಗೆ ಜ್ಞಾನ' ಅಂತ ಕೇಳಿ ಪಡೆಯುತ್ತಿದ್ದರು. ಕೆಲವೊಮ್ಮೆ ಬೆಸ್ತರನ್ನು ಕೇಳಿ ತಿಳಿದುಕೊಳ್ಳೋರು. ಅದಕ್ಕೇ ಈ ಮಾತು ಅವರ ಬಗ್ಗೆ ಒಪ್ಪವಾಗಿ ಕಟ್ಟಬಹುದಾದದ್ದು.'ನಾವು ಮೀನು ಮಾತ್ರ ಹಿಡಿಯುತ್ತಿದ್ದೆವು. ಅವರು ನದಿಯೊಳಗೆ ಹೋಗುತ್ತಿದ್ದರು. ಈಜು ಹೊಡೆಯುವವನ ರೀತಿಯಲ್ಲಿ. ನಾವು ಮೇಲೆ ಕುಳಿತು ನೋಡುವವರ ರೀತಿಯಲ್ಲಿ'.

–ಕೃಪಾಕರ
ವನ್ಯ ಜೀವಿ ಛಾಯಾಗ್ರಾಹಕ

ಮೂಡಿಗೆರೆ ಮೂಲಕವೇ ಜಗತ್ತು

ಪೂರ್ಣಚಂದ್ರ ತೇಜಸ್ವಿ ನಗರ ಜೀವನ ವರ್ಜಿಸಿ, ಮೂಡಿಗೆರೆ ಮೂಲಕ ಜಗತ್ತನ್ನು ಅನನ್ಯವಾಗಿ ನಿರೂಪಿಸಿದ ಅಪರೂಪದ ವ್ಯಕ್ತಿ.

ಶಿವಮೊಗ್ಗ ಮತ್ತು ಮೈಸೂರಿನಲ್ಲಿ ನನ್ನ ವಿದ್ಯಾರ್ಥಿಯಾಗಿದ್ದ ತೇಜಸ್ವಿ ಅಕಾಲಿಕ ನಿಧನ ದಿಗ್ಭ್ರಮೆ ತಂದಿದೆ. ಬಹುಮುಖ ವ್ಯಕ್ತಿತ್ವ ಮೈಗೂಡಿಸಿಕೊಂಡಿದ್ದ ತೇಜಸ್ವಿ ಸಮಕಾಲೀನ ಸಾಹಿತ್ಯಕ್ಕೆ ಮಹತ್ವದ ಕೊಡುಗೆ ನೀಡಿದ್ದರು. ಕೀರ್ತಿ, ಜನಪ್ರೀಯತೆಯನ್ನು ನಿರ್ಲಕ್ಷ್ಯ ಮನೋಭಾವದಿಂದ ಕಾಣುತ್ತಿದ್ದ, ಇಂಥ ವ್ಯಕ್ತಿತ್ವವನ್ನು ನಾನು ಎಲ್ಲಿಯೂ ನೋಡಿಲ್ಲ. ಒಬ್ಬ ವ್ಯಕ್ತಿಗೆ ಸಾಧ್ಯವಾಗುವ ಎಲ್ಲ ಕಾರ್ಯಗಳನ್ನು ಮಾಡಲು ಅವರು ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದರು. ಲೋಹಿಯಾ, ಅಂಬೇಡ್ಕರ್ ಹಾಗೂ ಗಾಂಧಿ ಸಿದ್ಧಾಂತಗಳೂ ಅವರ ಮೇಲೆ ಪ್ರಭಾವ ಬೀರಿವೆ.

ಸಮಕಾಲೀನ ಸಾಮಾಜಿಕ ಚಳವಳಿಗಳಲ್ಲೂ ಭಾಗವಹಿಸುವ ಮೂಲಕ ಅವರು ಕ್ರಿಯಾಶೀಲರಾಗಿದ್ದರು. ದಲಿತ ಬಂಡಾಯ ಚಳವಳಿ, ತಮ್ಮ ಸ್ನೇಹಿತರೆ ಆರಂಭಿಸಿದ ರೈತ ಸಂಘದ ಚಳವಳಿಯಲ್ಲಿ ಸಕ್ರಿಯವಾಗಿದ್ದು ಜೀವ ತುಂಬಿದ್ದರು.

–ರಾಷ್ಟ್ರಕವಿ, ಜಿ.ಎಸ್. ಶಿವರುದ್ರಪ್ಪ

'ನಾಡೋಜ' ಒಲ್ಲೆ ಎಂದಿದ್ದರು

ಹಂಪಿ ಕನ್ನಡ ವಿವಿಯ ಪ್ರತಿಷ್ಠಿತ ನಾಡೋಜ ಪ್ರಶಸ್ತಿಯನ್ನು ಸಾಹಿತಿ ಪೂರ್ಣಚಂದ್ರ ತೇಜಸ್ವಿ ಒಲ್ಲೆ ಎಂದಿದ್ದರು. ನಾಡೋಜ ಪ್ರಶಸ್ತಿ ನೀಡುವ ಬಗ್ಗೆ ತೇಜಸ್ವಿಯವರ ಮುಂದೆ ಎರಡುಬಾರಿ ಪ್ರಸ್ತಾಪಿಸಿದಾಗ, 'ಕನ್ನಡ ತಂತ್ರಾಂಶ ಅಭಿವೃದ್ಧಿಮಾಡಿ. ಅದು ನನಗೆ ನೀಡಿದ ನಾಡೋಜವಾಗುತ್ತದೆ' ಎಂದಿದ್ದರು.

ಹಂಪಿ ವಿವಿ, ಕುವೆಂಪು ಕನ್ನಡ ತಂತ್ರಾಂಶ ಬಿಟಾ ಹೊರತರುವುದಕ್ಕೆ ತೇಜಸ್ವಿಯವರೆ ಸ್ಫೂರ್ತಿ, ಮಾರ್ಗದರ್ಶಕರಾಗಿದ್ದರು. ಯುನಿಕೋಡ್ ಸೇರಿದಂತೆ ಇತರೆ ವಿಷಯಗಳನ್ನೊಳಗೊಂಡ ತಂತ್ರಾಂಶದ ಮುಂದಿನ ಆವೃತ್ತಿ ೬ ತಿಂಗಳಲ್ಲಿ ಹೊರತರಲು ಮಾರ್ಗದರ್ಶನ ನೀಡಿದ್ದರು.

ಹಂಪಿ ವಿವಿ ಹೊರತಂದ ಕುವೆಂಪು ಸಮಗ್ರ ಕಾವ್ಯ ೨ ಸಂಪುಟ, ಗದ್ಯ ೨ ಸಂಪುಟ ಹಾಗೂ ನಾಟಕ ಒಂದು ಸಂಪುಟ ಪ್ರಕಟಣೆಗೆ ತೇಜಸ್ವಿ ಕಾರಣ. ಕುಪ್ಪಳ್ಳಿಯಲ್ಲಿ ಕುವೆಂಪು ಕನ್ನಡ ಅಧ್ಯಯನ ಕೇಂದ್ರ ಸ್ಥಾಪನೆ, ಅದರ ಅಭಿವೃದ್ಧಿ ಹಾಗೂ ಕುವೆಂಪು ತಂತ್ರಾಂಶ ಅಭಿವೃದ್ಧಿ ಕೇಂದ್ರದ ಹಿಂದೆ ತೇಜಸ್ವಿ ಅವರ 'ತೇಜ'ವಿದೆ.

–ಬಿ.ಎ. ವಿವೇಕ್ ರೈ, ಕುಲಪತಿ, ಹಂಪಿ ವಿವಿ.

ಪ್ರಶಸ್ತಿಗೆ ಜೋತು ಬೀಳದ ಸಾಹಿತಿ

ತೇಜಸ್ವಿ ಕನ್ನಡದ ಸರ್ವಶ್ರೇಷ್ಠ ಕವಿ, ತಂದೆಯ ಪ್ರಭಾವದಿಂದ ಹೊರ ಬಂದು ಸಾಹಿತ್ಯ ಕೃಷಿ ಕೈಗೊಂಡವರು. ಅವರ ಬರಹದಲ್ಲಿ ಭಿನ್ನ ಚಿಂತನೆ, ಆದರ್ಶ, ಅನುಭವದ ಅಭಿವ್ಯಕ್ತಿ ಕಾಣಬಹುದಾಗಿದೆ.

ತಮ್ಮ ಬರಹಗಳಲ್ಲಿ ವಿಷಯ ವೈವಿಧ್ಯತೆ ಮೆರೆದ ತೇಜಸ್ವಿ ಸ್ವಭಾವತ ಹಾಸ್ಯ ಪ್ರಜ್ಞೆ ಉಳ್ಳವರಾಗಿದ್ದರು. ಕೃಷಿ, ತೋಟಗಾರಿಕೆ, ಪರಿಸರ, ಫೋಟೋಗ್ರಫಿ ಮೊದಲಾದವುಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು, ವಿಜ್ಞಾನ, ರಹಸ್ಯಗಳು ಮೊದಲಾದವುಗಳನ್ನು ಗಂಭೀರವಾಗಿ ಪರಿಗಣಿಸಿ ವಿಶ್ಲೇಷಿಸಿದರು. ಪ್ರಶಸ್ತಿ ಪುರಸ್ಕಾರಗಳಿಗೆ ಜೋತು ಬೀಳದ ಮೊದಲ ಸಾಹಿತಿ ಎಂದರೂ ತಪ್ಪಾಗಲಾರದು.

–ಚನ್ನವೀರ ಕಣವಿ

* * *

ಜನಪದ ವ್ಯಕ್ತಿ

ವೀರಶೈವ ಧರ್ಮದ ಸಾಕಾರಮೂರ್ತಿ ಶ್ರೀ ಶಿವಕುಮಾರಸ್ವಾಮಿ

– ಬಿ. ಅರವಿಂದ

ಇಲ್ಲಿ ದಶಕ ದಶಕಗಳಿಂದ ಉರಿಯುತ್ತಿರುವ ಅಡುಗೆಯ ಒಲೆ ಆರಿಲ್ಲ. ಬೆಳಗುತ್ತಿರುವ ಜ್ಞಾನಜ್ಯೋತಿ ನಂದಿಲ್ಲ. ದುಡಿಯುವ ಕೈಗಳು ಕೆಲಸ ನಿಲ್ಲಿಸಿಲ್ಲ. ಅಹಂಕಾರ, ಸ್ವಜಾತಿಪ್ರೇಮ, ಸ್ವಪ್ರತಿಷ್ಠೆಗಳೇ ಮೈತುಂಬಿ ನರ್ತಿಸುತ್ತಿರುವ ಕಾಲಘಟ್ಟದಲ್ಲಿ, 'ನಾನು' ಎಂಬುದಿಲ್ಲದ ಸರ್ವರ ಮಹಾಮನೆ ಇದು. ಇದನ್ನು ನೋಡಿದವರು ಬಗೆ ಬಗೆಯಲ್ಲಿ ಬಣ್ಣಿಸುತ್ತಿದ್ದರೆ ಇದರ ರೂವಾರಿ ಡಾ॥ ಶಿವಕುಮಾರ ಸ್ವಾಮೀಜಿ ಮಾತ್ರ ನಿರ್ಲಿಪ್ತರು. 'ನಾನು ಏನೂ ಅಲ್ಲ. ಬಸವಣ್ಣ ತೋರಿದ ದಾರಿಯಲ್ಲಿ ಕ್ರಮಿಸಲು ಶ್ರಮಿಸುತ್ತಿರುವೆನಷ್ಟೆ. ನನಗೇಕೆ ಪ್ರಶಸ್ತಿ, ಪುರಸ್ಕಾರ' ಎಂಬ ವಿನಮ್ರ ಭಾವದಲ್ಲಿ ಕಾಯಕದಲ್ಲಿ ನಿರತರು. ಸಿದ್ಧಗಂಗೆಯನ್ನು ಬಸವತತ್ವದ ಅನುಭವ ಮಂಟಪವನ್ನಾಗಿಸಿ, ಇಡೀ ನಾಡಿಗೆ ಮಾರ್ಗದರ್ಶಕರಾಗಿರುವವರು.

ತುಮಕೂರಿನ ಸಿದ್ಧಗಂಗಾ ಕ್ಷೇತ್ರದತ್ತ ಇಡೀ ವಿಶ್ವವೇ ನೋಡುವಂತಾಗಲು ಕಾರಣ ಶಿವಕುಮಾರಸ್ವಾಮಿಗಳು. ಸನ್ಯಾಸದ ಸೇವಾ ಮುಖಕ್ಕೆ ಹೊಸ ವ್ಯಾಖ್ಯಾನ ಬರೆದವರು ಸ್ವಾಮೀಜಿ. ಮಾನವನ ಬದುಕಿಗೆ ಅಗತ್ಯವಾದ ನಿಜ ಆಧ್ಯಾತ್ಮವನ್ನು ಜನರ ನಡುವೆ ತಂದವರು. ಸನ್ಯಾಸಿ ಯಾವುದೋ ಲೋಕದವನಲ್ಲ. ಸನ್ಯಾಸಿ ಜನರಿಂದ ದೂರವಾದವನೂ ಅಲ್ಲ ಎಂಬುದನ್ನು ಕಾಯಕ-ದಾಸೋಹಗಳ ಮೂಲಕ ಮಾಡಿತೋರಿಸುತ್ತಿರುವ ಮಹಾಯೋಗಿಯ ಜನ್ಮ ಶತಮಾನೋತ್ಸವ ವರ್ಷವಿದು. ಕರ್ನಾಟಕ ಸರ್ಕಾರ ಅತ್ಯುನ್ನತ 'ಕರ್ನಾಟಕ ರತ್ನ' ಪುರಸ್ಕಾರವನ್ನು ಸ್ವಾಮೀಜಿಯವರಿಗೆ ನೀಡಿರುವುದು ಸಹಜವಾಗಿ ಭಕ್ತಾದಿಗಳಿಗೆ ಅಪರಿಮಿತ ಸಂತಸವನ್ನು ತಂದಿದೆ. ಸ್ವಾಮೀಜಿ ಈ ವಿಷಯದಲ್ಲಿ ಮೌನಿ. ಇದು ಅರ್ಥಪೂರ್ಣ ಮೌನ. ಪ್ರಶಸ್ತಿ, ಪುರಸ್ಕಾರಗಳ ಬಗ್ಗೆ ಕಿಂಚಿತ್ತೂ ಒಲವಿಲ್ಲದ ಈ ಕಾಯಕಯೋಗಿ ಎಲ್ಲ ಪ್ರಶಸ್ತಿಗಳನ್ನೂ ಮೀರಿದವರು.

ಸ್ವಾಮೀಜಿ ಕಟ್ಟಿದ ಸಿದ್ಧಗಂಗೆ ನಾಡಿನ ಬಸವ ತತ್ವ ಪ್ರಯೋಗ ಶಾಲೆ. ಹಸಿದ ಹೊಟ್ಟೆಯ, ಆಶ್ರಯ ಇಲ್ಲದ ಕಂದನಿಗೆ ಅಕ್ಷರ ತಲೆಗೆ ಹೋಗದು ಎಂಬುದನ್ನು ಬಲವಾಗಿ ಪ್ರತಿಪಾದಿಸುವ ಶಿವಕುಮಾರ ಸ್ವಾಮಿಗಳು ಒಂಭತ್ತು ಸಾವಿರಕ್ಕೂ ಹೆಚ್ಚು ಮಕ್ಕಳ ಹಸಿದ ಹೊಟ್ಟೆಗೆ ಅನ್ನ ಮತ್ತು ಆಶ್ರಯ ನೀಡಿ ಅಕ್ಷರ ಕಲಿಸುತ್ತಿರುವ ಮಹಾಗುರು.

ಈ ತ್ರಿವಿಧ ದಾಸೋಹ ಮೂರ್ತಿ ನಡೆದು ಬಂದ ಹಾದಿ ಹೂವಿನ ಹಾಸಿಗೆಯಾಗಿತ್ತೇ? ಊಹುಂ, ಈಗಿನ ಸಿದ್ಧಗಂಗೆಯನ್ನು ನೋಡಿದ ಅಥವಾ ಸಿದ್ಧಗಂಗೆಯ ಭಾಗವಾದ ಯುವಪೀಳಿಗೆಗೆ ಹಾಗೆನ್ನಿಸಬಹುದು. ಆದರೆ ಈ ಸಿದ್ಧಗಂಗೆ ಮಂತ್ರದಿಂದ ಕಟ್ಟಿದ ಪೌರಾಣಿಕ ಮಂಟಪವಲ್ಲ. ಸ್ವಾಮೀಜಿ ಅವರ ಬೆವರು ಇಲ್ಲಿನ ಕಣಕಣದಲ್ಲಿದೆ. ದುಡಿಯುವ ಕೈಗಳು ನಮಿಸುವ ಕೈಗಳಿಗಿಂತ ಶ್ರೇಷ್ಠ ಎಂಬ ಸಮಾಜವಾದಿ ಸಿದ್ಧಾಂತವನ್ನು ಅಕ್ಷರಶಃ ಪಾಲಿಸಿಕೊಂಡು ಬಂದಿರುವುದರಿಂದಲೇ ಶಿವಕುಮಾರ ಸ್ವಾಮೀಜಿ ಸನ್ಯಾಸದ ಅರ್ಥವನ್ನು ಆಕಾಶದೆತ್ತರಕ್ಕೆ ಏರಿಸಿದ್ದಾರೆ.

ಮಕ್ಕಳಿಗೆ ತ್ರಿವಿಧ ದಾಸೋಹದ ಒಂದು ನೆಲೆಯನ್ನು ಕಲ್ಪಿಸಬೇಕು ಎಂಬ ದೃಢ ನಿಶ್ಚಯ ಹಾಗೂ ಅಚಲ ಮನಸ್ಸಿನಿಂದ ಕಾಯಕಕ್ಕೆ ಇಳಿದ ಸ್ವಾಮೀಜಿ, ಎಲ್ಲ ಸಂಕಷ್ಟಗಳಿಗೂ ಎದೆಯೊಡ್ಡಿ ನಿಂತವರು, ಕಷ್ಟ ನಷ್ಟಗಳನ್ನೂ ಲೆಕ್ಕಿಸದೇ ನಡೆದವರು. ೧೯೪೧ರಲ್ಲಿ ಮಠದ ಮುಖ್ಯಸ್ಥರಾದಾಗ ಸಿದ್ಧಗಂಗೆಯ ಬೆಟ್ಟದ ತಪ್ಪಲಿನಲ್ಲಿ ಈಗಿನಂತೆ ಕಟ್ಟಡಗಳಿರಲಿಲ್ಲ. ರಾಜಾಶ್ರಯ ಮೊದಲೇ ಇರಲಿಲ್ಲ. ಗುರುಗಳಾದ ಉದ್ದಾನ ಶಿವಯೋಗಿಗಳು ಶಿಕ್ಷಣ-ದಾಸೋಹ ಬೀಜ ಬಿತ್ತಿದ್ದರು. ಅದನ್ನು ಪೋಷಿಸಿ ಬೆಳೆಸಲೇಬೇಕಾಗಿತ್ತು. ಇದು ಕೇವಲ ಕರ್ತವ್ಯ ಪ್ರಜ್ಞೆಯಾಗಿರಲಿಲ್ಲ. ಬದಲಾಗಿ ಶಿವಕುಮಾರ ಶ್ರೀಗಳ ಆಂತರ್ಯದ ತುಡಿತವಾಗಿತ್ತು. ಬಿಸಿಲು, ಮಳೆ ಸ್ವಾಮೀಜಿ ಅವರನ್ನು ತಡೆಯಲಿಲ್ಲ. ನಡೆದರು, ಊರೂರು ಸುತ್ತಿದರು. ತುಂಬ ದೂರದ ಗ್ರಾಮಗಳಿಗೆ ಕುದುರೆಯನ್ನು ಏರಿ ತಾವೇ ಸವಾರಿ ಮಾಡಿಕೊಂಡು ಹೋದರು. ಅದೂ ಸಾಧ್ಯವಾಗದಿದ್ದ ಕುಗ್ರಾಮಗಳಿಗೆ ಮೈಲುಗಟ್ಟಲೇ ನಡೆದು ತಲುಪಿದರು. ಅಲ್ಲಿ ಜನರ ಮಧ್ಯೆ ಕುಳಿತರು. ಸಿದ್ಧಗಂಗೆಯ ಮಕ್ಕಳನ್ನು ಉಳಿಸಲು ನೆರವಾಗಿ ಎಂದು ಸಾತ್ವಿಕ ಭಿಕ್ಷೆ ಬೇಡಿದರು. ಮಕ್ಕಳ ವಿಚಾರವಾಗಿ ಯಾವುದನ್ನೂ ಕಡೆಗಣಿಸುವ ಮಾತೇ ಇರಲಿಲ್ಲ. ಜನರಿಂದ ದೇಣಿಗೆ ಸಂಗ್ರಹ, ಮರಳಿ ಬಂದು ಸಿದ್ಧಗಂಗೆಯನ್ನು ಭೌತಿಕವಾಗಿ ಮತ್ತು ಬೌದ್ಧಿಕವಾಗಿ ಕಟ್ಟುವ ಕಾಯಕ. ನಂತರ ತಪಸ್ಸು, ಭಾವೀ ಪೀಳಿಗೆಯ ಹಿತಕ್ಕಾಗಿ ಸ್ವಾಮೀಜಿ ಅವರು ಆರಂಭದ ವರ್ಷಗಳಲ್ಲಿ ಸರ್ಕಾರಿ ಕಚೇರಿಗಳ ಬಳಿ ಬಿಸಿಲಲ್ಲಿ ಕಾದಿದ್ದಾರೆ. ಇಂಡಿಯನ್ ರೆಡ್ ಟೇಪಿಸಂ (ಭಾರತೀಯ ಅಧಿಕಾರ ಶಾಹಿಯ ವಿಳಂಬ ನೀತಿ) ಬಿಸಿ ಈ ಮಹಾಗುರುವನ್ನೂ ತಟ್ಟಿದೆ. ಆದರೆ ಎಲ್ಲವನ್ನೂ ಮಕ್ಕಳಿಗಾಗಿ ನುಂಗಿ ಕೊಂಡಿದ್ದಾರೆ. ಈ ಭೂಮಿಯಂತೆ. ತಪಸ್ಸಿನಂತೆ ಸಿದ್ಧಗಂಗೆಯನ್ನು ಕಟ್ಟಿ, ಇಂದಿನ ಸ್ಥಿತಿಗೆ ತಂದಿದ್ದಾರೆ. ತೀರ ಈಚಿನ ವರ್ಷಗಳವರೆಗೆ ಮಕ್ಕಳಿಗೆ ಇತಿಹಾಸ, ಇಂಗ್ಲೀಷ್, ಸಂಸ್ಕೃತಗಳನ್ನು ಬೋಧಿಸಿದ್ದಾರೆ. ನಾಡು ಇತ್ತ ತಿರುಗುವಂತೆ ಮಾಡಿದ್ದಾರೆ.

ಶೈಕ್ಷಣಿಕ ವರ್ಷ ಆರಂಭವಾಗುತ್ತಿದ್ದಂತೇ ಪ್ರವೇಶ ಜಾತ್ರೆಯೇ

ಸಿದ್ಧಗಂಗೆಯಲ್ಲಿ ಆರಂಭವಾಗುತ್ತದೆ. ಒಬ್ಬ ಹುಡುಗನನ್ನೂ ಬಿಡದಂತೆ ಸ್ವತಃ ಸ್ವಾಮೀಜಿ ಅವರೇ ಸಂದರ್ಶನ ಮಾಡಿ 'ಅಡ್ಮಿಟ್' ಎಂದು ಷರಾ ಬರೆಯುತ್ತಾರೆ. ಸಿದ್ಧಗಂಗೆಯಲ್ಲಿ ಉಳಿದು ಶಿಕ್ಷಣ ಪಡೆಯಲು ಬೇಕಾದ ಅರ್ಹತೆಗಳೇನು? ಏನಾದರೂ ಇನ್‌ಫ್ಲೂಯನ್ಸ್ (ಪ್ರಭಾವ) ನಡೆಯುತ್ತದೆಯೇ? ಜಾತಿ ಕೆಲಸ ಮಾಡುತ್ತದೆಯೇ? ಖಂಡಿತ ಇಲ್ಲ. ಮೊದಲು ಬಡವರಾಗಿರಬೇಕು. ವಿದ್ಯಾರ್ಜನೆ ಹಸಿವಿರಬೇಕು. ರ್‍ಯಾಂಕ್ ವಿದ್ಯಾರ್ಥಿ ಆಗಿರಲೇಬೇಕೆಂಬ ನಿಯಮವಿಲ್ಲ. ಜಾತಿಗೆ ಬೆಲೆಯಿಲ್ಲ. ರ್‍ಯಾಂಕ್ ವಿದ್ಯಾರ್ಥಿಗೆ ಯಾರೋ ಸೀಟ್ ಕೊಡುತ್ತಾರೆ. ಕಡಿಮೆ ಅಂಕ ಪಡೆದ ಮಗುವನ್ನು ಯಾರು ಸೇರಿಸಿಕೊಳ್ಳುತ್ತಾರೆ ಎಂಬುದು ಸ್ವಾಮೀಜಿ ಚಿಂತನೆ. ಎರಡು ಹೊತ್ತು ಹೊಟ್ಟೆ ತುಂಬ ಊಟ ದೊರೆಯದ ಬಡವರ ಮನೆಯ ಕಂದ, ರ್‍ಯಾಂಕ್ ವಿದ್ಯಾರ್ಥಿಯಾಗಿರಲಿ ಎಂಬುದನ್ನು ನಿರೀಕ್ಷಿಸುವುದು ತಪ್ಪು ಎನ್ನುತ್ತಾರೆ ಸ್ವಾಮೀಜಿ. ದಿನವೊಂದಕ್ಕೆ ಇಪ್ಪತ್ತು ಗಂಟೆಗೂ ಹೆಚ್ಚು ಕೆಲಸ ಮಾಡುವ, ಜನರ ನಡುವಿನ ಸಂತನ ಮನಸ್ಸಿದು.

ಅರವತ್ತು-ಎಪ್ಪತ್ತರ ದಶಕದ ಮಧ್ಯಭಾಗದಲ್ಲೊಮ್ಮೆ ನಾಡನ್ನು ಭೀಕರ ಬರ ಆವರಿಸುತ್ತದೆ. ತುಮಕೂರು, ಬೆಂಗಳೂರು ಗ್ರಾಮಾಂತರ ಸುತ್ತಮುತ್ತಲಿನ ಬಡ ಜನತೆಗೆ ಹೊಟ್ಟೆಗೆ ಅನ್ನವಿಲ್ಲದಂತಹ ಯಾತನಾಮಯ ದಿನಗಳು. ಆ ವೇಳೆಗೆ ತ್ರಿವಿಧ ದಾಸೋಹದಿಂದ ಸಿದ್ಧಗಂಗೆ ಪ್ರಸಿದ್ಧಿಗೆ ಬಂದಿರುತ್ತದೆ. ಬಡ ಜನತೆ ಇಲ್ಲಿಗೆ ಧಾವಿಸುತ್ತಾರೆ. ಸ್ವಾಮೀಜಿ ಯಾರನ್ನೂ ಮರಳಿ ಕಳಿಸುವುದಿಲ್ಲ. ಸುಡುಬಿಸಿಲನ್ನೂ ಲೆಕ್ಕಿಸದೇ ತಾವೇ ಸ್ವತಃ ನಿಂತು ಜನತೆಗೆ ಊಟ ಆಶ್ರಯದ ವ್ಯವಸ್ಥೆ ಮಾಡುತ್ತಾರೆ. ಒಂದು ಮಧ್ಯಾಹ್ನ ಸ್ವಾಮೀಜಿ ಅವರು, ಸರದಿಯಲ್ಲಿ ನಿಂತ ಜನತೆಗೆ ಊಟದ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿರುತ್ತಾರೆ. ಸಿದ್ಧಗಂಗೆಯಲ್ಲಿ ನಡೆಯುತ್ತಿದ್ದ ದಾಸೋಹದ ಬಗ್ಗೆ ಮಾಹಿತಿ ಪಡೆದಿದ್ದ ಅಂದಿನ ಮುಖ್ಯಮಂತ್ರಿ ನಿಜಲಿಂಗಪ್ಪನವರು ಆಗಮಿಸುತ್ತಾರೆ. ಬರಿಗಾಲಿನಲ್ಲಿ ನಿಂತು ಸ್ವಾಮೀಜಿ ಅವರು ಸಹಸ್ರಾರು ಜನಕ್ಕೆ ಅನ್ನ ಹಾಕುತ್ತಿದ್ದುದನ್ನು ನೋಡಿ ಮೂಕವಿಸ್ಮಿತರಾಗುತ್ತಾರೆ. ಸ್ಥಳದಲ್ಲಿದ್ದ ಜಿಲ್ಲಾಧಿಕಾರಿಗಳಿಗೆ, ಬರ ನಿರ್ವಹಣೆಯಲ್ಲಿ ತನ್ನದೇ ಆದ ವಿಶಿಷ್ಟ ರೀತಿಯಿಂದ ಸ್ಪಂದಿಸುತ್ತಿರುವ ಮಠಕ್ಕೆ ಯಾವುದೇ ಆಡಳಿತಾತ್ಮಕ ಸಮಸ್ಯೆಯನ್ನೂ ಮಾಡಕೂಡದು ಎಂದು ತಾಕೀತು ಮಾಡುತ್ತಾರೆ. ಸ್ವಾಮೀಜಿಯ ಈ ಮುಖವನ್ನು ವಿವರಿಸಲು ಯಾವುದಾದರೂ ಮಾತುಗಳಿವೆಯೇ!? ದಾಸೋಹ ಸ್ವಾಮೀಜಿಯವರಿಗೆ ಔಪಚಾರಿಕ ಕ್ರಿಯೆ ಅಲ್ಲ. ತಾಯಿ ಪ್ರೀತಿಯಿಂದ ಮಕ್ಕಳಿಗೆ ಕೈ ತುತ್ತು ಬಡಿಸಿದಂತಹ ಪ್ರೀತಿಯ ಪರಿ ಇದು. ಆದ್ದರಿಂದಲೇ ಅಲ್ಲವೇ, ಇಂದು ಸಹಸ್ರಾರು ಮಕ್ಕಳಲ್ಲದೇ ಸಾವಿರ ಸಾವಿರ ಸಂಖ್ಯೆಯ ಜನತೆ ಮಠಕ್ಕೆ ಬಂದು ದಾಸೋಹದ ಸವಿಯನ್ನು ಅನುಭವಿಸುತ್ತಿರುವುದು.

ಪ್ರೇಮದಲ್ಲಿ ಹುಟ್ಟಿ, ಪ್ರೇಮದಲ್ಲಿ ಬೆಳೆದು, ಪ್ರೇಮದಲ್ಲಿ ಕೊನೆಗಾಣುವ ಅನ್ವೇಷಣೆಯೇ ಭಕ್ತಿ ಎನ್ನುತ್ತಾರೆ ಶಿವಕುಮಾರ ಸ್ವಾಮೀಜಿ. ಬೆವರು ಸುರಿಸದೇ, ಯಾವುದಾದರೂ ಒಂದು ಕಾಯಕವನ್ನು ಮಾಡದೇ ಫಲ ಅನುಭವಿಸಲು ಯಾರಿಗೂ ಹಕ್ಕಿಲ್ಲ ಎಂದು ಸಾರಿ ಹೇಳುವ ಅವರು ದುಡಿಯಬೇಕು, ದುಡಿದುದನ್ನು ಹಂಚಿ ಉಣ್ಣಬೇಕು ಎನ್ನುತ್ತಾರೆ. ಕಾಯಕವೇ ಕೈಲಾಸ ಎಂಬ ಮಾತು ಎಷ್ಟು ಅಗತ್ಯ ಎಂಬುದನ್ನು ಮಾತ್ರ ಪರಿಗಣಿಸದೇ, ಸಮಾಜ ಆರ್ಥಿಕವಾಗಿ ಬಲಿಷ್ಠವಾಗಲು ಈ ಮಾತು ಎಷ್ಟು ಅಗತ್ಯ ಎಂಬುದನ್ನು ಮನಗಂಡಿರುವ ಸ್ವಾಮೀಜಿ ಅವರ ಆರ್ಥಿಕ ಒಳನೋಟಗಳು ಅನನ್ಯ. ಸ್ವಾಮೀಜಿಯಲ್ಲಿರುವ ಆರ್ಥಿಕ ತಜ್ಞನ ಬಗ್ಗೆ ಅರಿಯುವ ಕೆಲಸ ಹೆಚ್ಚು ಹೆಚ್ಚಾಗಿ ಆಗಬೇಕಾಗಿದೆ. ಇಂದಿನ ವೈಜ್ಞಾನಿಕ ಯುಗದಲ್ಲಿ ಮೌಲ್ಯಗಳನ್ನು ಕಳೆದುಕೊಳ್ಳುತ್ತಿರುವ ಮನುಷ್ಯ, ಮೃಗನಾಗುತ್ತಿದ್ದಾನೆ ಎಂಬ ನೋವು ಅವರಲ್ಲಿ ಮಡುಗಟ್ಟಿದೆ.

ಕೃತಕತೆ, ಯಾಂತ್ರಿಕತೆಗಳಿಂದ ದೂರವಾದ ಪರಿಸರವನ್ನು ನಿರ್ಮಿಸಿರುವ, ಇಪ್ಪತ್ತು ಮತ್ತು ಇಪ್ಪತ್ತೊಂದನೇ ಶತಮಾನಗಳ ಎಲ್ಲ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಗಮನಿಸಿ ಪ್ರೀತಿಯನ್ನು ಪಸರಿಸುತ್ತಿರುವ ಶಿವಕುಮಾರ ಸ್ವಾಮೀಜಿ ನೂರರ ಇಳಿವಯಸ್ಸಿನಲ್ಲೂ ಪಾದರಸದಂತಿದ್ದಾರೆ. ವೇಗದ ನಡಿಗೆ, ಕನ್ನಡಕದ ಹಂಗಿಲ್ಲದ ನೋಟ, ಸ್ಪಷ್ಟ ಮಾತು, ಗ್ರಹಿಕೆ, ಅಸಾಧಾರಣ ನೆನಪಿನ ಶಕ್ತಿ, ಬಹುಭಾಷಾ ಪಾಂಡಿತ್ಯ, ಸಾಟಿ ಇಲ್ಲದ ವಿದ್ವತ್ತು ಸ್ವಾಮೀಜಿಯ ವ್ಯಕ್ತಿತ್ವದ ಅವಿಭಾಜ್ಯ ಅಂಗಗಳು. ಸಿದ್ಧಗಂಗೆಯನ್ನು ಸ್ವಾಮೀಜಿ ಎಲ್ಲರ ಪ್ರೀತಿಯ ತಾಣವನ್ನಾಗಿ, ನೆಮ್ಮದಿ ನೀಡುವ ಸ್ಥಳವನ್ನಾಗಿ ಮಾಡಿದ್ದಾರೆ. ಆಡಂಬರ ಮತ್ತು ಪ್ರದರ್ಶನದ ಸೊಂಕು ಕ್ಷೇತ್ರದ ಸಮೀಪವೂ ಬಾರದಂತೆ ನೋಡಿಕೊಂಡಿದ್ದಾರೆ. ಸಿದ್ಧಗಂಗೆಯ ಹಳೆಯ ವಿದ್ಯಾರ್ಥಿಯೂ ಆದ ರಾಷ್ಟ್ರಕವಿ ಡಾ॥ ಜಿ.ಎಸ್. ಶಿವರುದ್ರಪ್ಪನವರು ತಮ್ಮ ಕವನ 'ಶ್ರೀ ಸಿದ್ಧಗಂಗೆಯ ಶ್ರೀ ಚರಣದಲ್ಲಿ' ಹೇಳಿರುವಂತೆ, 'ಸದ್ದುಗದ್ದಲವಿರದ ಸಾಧನೆ ಇಲ್ಲಿ ಗದ್ದುಗೆ ಏರಿದೆ; ಕಾಯಕವೇ ಕೈಲಾಸವೆನ್ನುವ ಮಾತು ಕೃತಿಯೊಳು ಮೂಡಿದೆ'.

ಡಾ॥ಶಿವಕುಮಾರ ಸ್ವಾಮೀಜಿ ಅವರು ಜನಿಸಿದ್ದು ಬೆಂಗಳೂರು ಗ್ರಾಮಾಂತರ ಜಿಲ್ಲೆ ಸೋಲೂರು ಹೋಬಳಿಯ ವೀರಾಪುರ ಗ್ರಾಮದಲ್ಲಿ. ಹೊನ್ನೇಗೌಡ ಹಾಗೂ ಗಂಗಮ್ಮ ಅವರ ೧೩ನೇ ಹಾಗೂ ಕೊನೆಯ ಪುತ್ರ. ತುಮಕೂರಿನಲ್ಲಿ ಹೈಸ್ಕೂಲ್ ವ್ಯಾಸಂಗ, ಹೈಸ್ಕೂಲ್ ವ್ಯಾಸಂಗ ಮಾಡುವಾಗ ಸಿದ್ಧಗಂಗಾ ಮಠದ ಆಗಿನ ಮಠಾಧ್ಯಕ್ಷರಾದ ಶ್ರೀ ಉದ್ದಾನ ಶಿವಯೋಗಿಗಳ ಸಂಪರ್ಕ. ಹೈಸ್ಕೂಲಿನ ಕೊನೆಯ ಹಂತದಲ್ಲಿ ಮಠದಲ್ಲಿ ಉಳಿದು ವ್ಯಾಸಂಗ. ನಂತರ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ. ಪದವಿ. ಉದ್ದಾನ ಶಿವಯೋಗಿಗಳೊಂದಿಗೆ ಪದವಿ

ಮುಗಿಯುವವರೆಗೂ ಸತತ ಸಂಪರ್ಕ. ಶಿವಕುಮಾರ ಸ್ವಾಮೀಜಿಗಳಲ್ಲಿನ ಆಧ್ಯಾತ್ಮ ಹಾಗೂ ಸೇವೆಯ ಹಸಿವನ್ನು ಗುರುತಿಸಿದ ಉದ್ದಾನ ಶ್ರೀಗಳು, ೧೯೩೦ ರಲ್ಲಿ ಇವರನ್ನು ಮಠದ ಕಿರಿಯ ಸ್ವಾಮೀಜಿಗಳನ್ನಾಗಿ ನೇಮಕ ಮಾಡಿಕೊಂಡರು. ಉದ್ದಾನ ಶ್ರೀಗಳ ನಿಧನದ ನಂತರ ೧೯೪೧ರಲ್ಲಿ ಶಿವಕುಮಾರ ಸ್ವಾಮೀಜಿ ಮಠಾಧ್ಯಕ್ಷರಾಗಿ ಅಧಿಕಾರಕ್ಕೆ ಬಂದರು. ಪ್ರಸ್ತುತ ಸಿದ್ಧಗಂಗಾ ಮಠದಲ್ಲಿ ಒಂಬತ್ತು ಸಾವಿರ ವಿದ್ಯಾರ್ಥಿಗಳಿದ್ದಾರೆ. ಮಠದಲ್ಲಿ ವಸತಿ ಸಹಿತ ಶಿಕ್ಷಣಕ್ಕಾಗಿ ಆಶ್ರಯ ಪಡೆದ ವಿದ್ಯಾರ್ಥಿಗಳಲ್ಲದೇ, ಸಿದ್ಧಗಂಗಾ ವಿದ್ಯಾಸಂಸ್ಥೆ ನಡೆಸುತ್ತಿರುವ ೧೨೫ ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ನಲವತ್ತು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಸ್ವಾಮೀಜಿ ಅವರ ನೇತೃತ್ವದ ಸಿದ್ಧಗಂಗಾ ಶಿಕ್ಷಣ ಸಂಸ್ಥೆಯು ರಾಜ್ಯದ ಪತಿಷ್ಠಿತ ಸಿದ್ಧಗಂಗಾ ಎಂಜಿನಿಯರಿಂಗ್ ಕಾಲೇಜು ಸೇರಿದಂತೆ ವಿವಿಧ ಶಿಕ್ಷಣ ಸಂಸ್ಥೆಗಳನ್ನು ಹೊಂದಿದೆ. ಸಿದ್ಧಗಂಗಾ ಮಠವು ತುಮಕೂರಿನಿಂದ ಸುಮಾರು ೬ ಕಿ.ಮೀ. ಹಾಗೂ ರಾಜಧಾನಿ ಬೆಂಗಳೂರಿನಿಂದ ೬೫ ಕಿ.ಮೀ ದೂರದಲ್ಲಿದೆ.

ಸಿದ್ಧಗಂಗೆಯಲ್ಲಿ ಒಂದು ದಿನದ ದಾಸೋಹಕ್ಕೆ ೩೦ಕ್ವಿಂಟಾಲ್ ಅಕ್ಕಿ, ೧೫ ಕ್ವಿಂಟಾಲ್ ರಾಗಿ ಹಿಟ್ಟು, ೩ ಕ್ವಿಂಟಾಲ್ ತೊಗರಿ ಬೇಳೆ, ೪ ಕ್ವಿಂಟಾಲ್ ತರಕಾರಿ, ೩ ಕ್ವಿಂಟಾಲ್ ಈರುಳ್ಳಿ, ೫ ಕ್ವಿಂಟಾಲ್ ರವೆ, ೧ ಕ್ವಿಂಟಾಲ್ ಉಪ್ಪು, ೬೦ ಕಿಲೋ ಗ್ರಾಂ ಹುಣಿಸೇಹಣ್ಣು, ೨೫ ಕಿಲೋ ಗ್ರಾಂ ಮೆಣಸಿನಕಾಯಿ, ೩೦೦ ಲೀಟರ್ ಹಾಲು, ೧೦೦ ಕಿಲೋ ಗ್ರಾಂ ಕಡಲೆಕಾಯಿ ಎಣ್ಣೆ ಹಾಗೂ ೩೦೦ ತೆಂಗಿನಕಾಯಿ ಬೇಕಾಗುತ್ತವೆ.

ಸಹಸ್ರಾರು ಜನಕ್ಕೆ ಪ್ರೀತಿಯಿಂದ ಅನ್ನ ಉಣಬಡಿಸುತ್ತಿರುವ ಸ್ವಾಮೀಜಿ ಅತ್ಯಂತ ಮಿತಾಹಾರಿ, ಅರ್ಧದಲ್ಲಿ ಅರ್ಧ ಭಾಗ ರಾಗಿ ಮುದ್ದೆ, ಒಂದು ಹೋಳು ಹಣ್ಣು, ಎರಡು ತುತ್ತು ಅನ್ನ, ಅರ್ಧ ಲೋಟದಷ್ಟು ಸಪ್ಪನೆಯ ಬೇಳೆಸಾರು ಹಾಗೂ ಬೇವಿನ ಎಲೆ ಕಷಾಯ ಇವಿಷ್ಟೇ ಮೊದಲಿನಿಂದಲೂ ಸ್ವಾಮೀಜಿಯವರ ಆಹಾರ. ಅವರ ಆರೋಗ್ಯದ ಗುಟ್ಟು ಮಿತಾಹಾರ ಮತ್ತು ಕಠಿಣ ದೈಹಿಕ ಪರಿಶ್ರಮ. ಜೊತೆಗೆ ಪ್ರತಿನಿತ್ಯ ನಸುಕಿನ ೨ ಗಂಟೆಗೇ ಎದ್ದು ಮಾಡುವ ಶಿವಪೂಜೆ ಎನ್ನುತ್ತಾರೆ ಸಮೀಪವರ್ತಿಗಳು.

* * *

ಜನಪದ ನಿಲಯದ ಅಂತರಂಗದಲ್ಲಿ ೪೨

– ಸುರೇಂದ್ರ ಕೌಲಗಿ

ಈ ಆದಿತ್ಯ ಭಗವಂತನು ಸಮಸ್ತ ಭೂತಗಳನ್ನು ನಾಶಪಡಿಸುತ್ತಾನೆ. ಅದನ್ನೇ ಮತ್ತೆ ಸೃಷ್ಟಿ ಮಾಡುತ್ತಾನೆ. ತನ್ನ ಕಿರಣಗಳಿಂದ ಈ ಸ್ವಾಮಿಯೇ ಒಣಗಿಸುತ್ತಾನೆ, ಸುಟ್ಟುಹಾಕುತ್ತಾನೆ, ಈತನೇ ಮಳೆ ಸುರಿಸುತ್ತಾನೆ.

– ಆದಿತ್ಯ ಹೃದಯದಿಂದ



ಜನಪದ ಸೇವಾ ಟ್ರಸ್ಟಿನ ಉದ್ದೇಶ್ಯಗಳು ಮತ್ತು ಆ ಉದ್ದೇಶ್ಯಗಳ ಆಧಾರವಾಗಿ ಕೈಗೊಂಡ ಕಾರ್ಯಕ್ರಮಗಳಿಗೆ ಹೊಸ ಜೀವನ ದಾರಿ ಕ್ರಮೇಣ ಪ್ರಮುಖ ಕೇಂದ್ರವಾಗಿ ಹೊಮ್ಮಲಾರಂಭಿಸಿತು. ಏಕೆಂದರೆ ಆ ಕೇಂದ್ರಕ್ಕೆ ಇಡಲಾದ ಹೆಸರೇ ಒಂದು ರೀತಿಯಲ್ಲಿ ಕಾರ್ಯಕ್ರಮಗಳಿಗೆ ಅಂತರ್‌ಗಂಗೆಯಾಗಿ ಪ್ರಾಣಸತ್ವವನ್ನು ಕೊಡಲು ಪ್ರಾರಂಭಿಸಿತು. ಹೊಸ ಜೀವನ ದಾರಿ ಕೇಂದ್ರದ ವಿಶಾಲವಾದ ಸ್ಥಳ, ಸುತ್ತಲಿನ ಪ್ರಕೃತಿ, ಶಾಂತ ವಾತಾವರಣ ಅಕ್ಕ ಪಕ್ಕದ ಗ್ರಾಮಗಳಿಂದ ಅಷ್ಟು ದೂರ ಅಲ್ಲದ, ಅಷ್ಟು ಸನಿಹವೂ ಅಲ್ಲದ ತಾಣ, ಯಾವುದೇ ಪ್ರಕಾರದ ಮೂಲಭೂತ ಸೌಕರ್ಯಗಳಿಲ್ಲದ ಸ್ಥಳ ಇತ್ಯಾದಿ ಸಂಗತಿಗಳು ಅನೇಕ ಪ್ರಕಾರದ ಪ್ರಯೋಗಗಳಿಗೂ, ಸಾಹಸಯುಕ್ತ ಕಾರ್ಯಕ್ರಮಗಳಿಗೂ ಆಹ್ವಾನ ಕೊಡುವಂತಿದ್ದವು. ಅಲ್ಲಿದ್ದ ಕೊರತೆಗಳು ನಿಜವಾಗಿಯೂ ಹಿಮ್ಮೆಟ್ಟಿಸುವಂಥದ್ದಾಗಿದ್ದವು. ವಾಸ ಮಾಡಲು ಕಟ್ಟಡಗಳೇ ಇರಲಿಲ್ಲ, ನೀರು ಇರಲಿಲ್ಲ, ವಿದ್ಯುತ್ ದೀಪ ಇರಲಿಲ್ಲ, ದೂರವಾಣಿ ಇರಲಿಲ್ಲ, ಬಸ್ ಸೌಕರ್ಯ ಇರಲಿಲ್ಲ. ಮಧ್ಯಾಹ್ನವೂ ಮಧ್ಯ ರಾತ್ರಿಯ ಹಾಗೆ ನಿರ್ಜನವಾಗಿರುತ್ತಿದ್ದ ಜಾಗ. ಇಂಥ ಜಾಗದಲ್ಲಿ ನಗರದ ಯಾವುದೇ ಯುವಕರು ಬಂದಿರುವ ಸಾಧ್ಯತೆ ಇರಲಿಲ್ಲ, ಕುಟುಂಬಗಳು ಬಂದು ಇರಲು ಸಾಧ್ಯವಿರಲಿಲ್ಲ, ಹಾಗಂತ ವಿಚಾರ ಶೂನ್ಯರಾಗಿ, ಕ್ರಿಯಾಹೀನರಾಗಿಯೂ ಕುಳಿತಿರುವಂತಿಲ್ಲ. ಮನಸ್ಸಿನಲ್ಲಿ ಟ್ರಸ್ಟಿನ ಉದ್ದೇಶಗಳು ಏಕತಾನವಾಗಿ ಕುಣಿಯುತ್ತಿದ್ದವು. ಹೊಸ ಜೀವನ ದಾರಿಯಲ್ಲಿ ಚಟುವಟಿಕೆಗಳನ್ನು ಪ್ರಾರಂಭಿಸಬೇಕಾದರೆ ಮೊದಲು ನೀರಿನ ವ್ಯವಸ್ಥೆ ಮತ್ತು ಕಟ್ಟಡದ ನಿರ್ಮಾಣ ಆಗಬೇಕಾದುದು ಅಗತ್ಯವಾಗಿತ್ತು. ಆದ್ದರಿಂದ ಈ ಎರಡು ಕೆಲಸಗಳನ್ನು ಕೈಗೆತ್ತಿಕೊಳ್ಳಲಾಯಿತು. ಬಾವಿ ತೋಡಿಸಬೇಕಾದರೆ ಆ ವಿಶಾಲ

ಪ್ರದೇಶದಲ್ಲಿ ಸಾಕಷ್ಟು ಮತ್ತು ಸುಲಭವಾಗಿ ನೀರು ದೊರೆಯುವ ಸ್ಥಳವನ್ನು ಗುರುತಿಸುವುದು ಅಗತ್ಯವಾಯಿತು. ಆಗ ಮಂಡ್ಯದಿಂದ ಭೂಗರ್ಭ ಇಲಾಖೆಗೆ ಫೀಜು ಕಟ್ಟಿ ಓರ್ವ ನೀರು ಪರಿಶೋಧಕನನ್ನು ಕರೆತರಲಾಯಿತು. ಈ ಕೆಲಸಕ್ಕಾಗಿ ಹತ್ತಾರು ಬಾರಿ ಮಂಡ್ಯಕ್ಕೆ ಯಾತ್ರೆ ಮಾಡಬೇಕಾಯಿತು. ಕೊನೆಗೊಮ್ಮೆ ಜಲ ಪರಿಶೋಧಕನನ್ನು ಜೊತೆಯಲ್ಲಿಯೇ ಕರೆದುಕೊಂಡು ಬರಲು ಸಾಧ್ಯವಾಯಿತು. ಆ ಶೋಧಕ ತನ್ನೊಂದಿಗೆ ಅದಾವುದೋ ಗಡಿಯಾರ ಆಕಾರದ ಒಂದು ಯಂತ್ರವನ್ನು ತಂದಿದ್ದ. ಅವನ ಜೊತೆಗೆ ನಡೆದುಕೊಂಡೇ ಮತ್ತು ಮೆಟ್ಟಿಲುಗಳನ್ನು ಇಳಿದುಕೊಂಡೇ ಹೊಸ ಜೀವನ ದಾರಿ ಕೇಂದ್ರಕ್ಕೆ ಹೋಗಿ ಅಲ್ಲಿ ಅವನೊಂದಿಗೆ ಒಂದೆರಡು ಗಂಟೆ ವಿಶಾಲ ಪ್ರದೇಶವನ್ನೆಲ್ಲ ಸುತ್ತಾಡಿದ್ದಾಯಿತು. ಅವನ ಪ್ರಕಾರ ಈ ಪ್ರದೇಶವೆಲ್ಲ ಕಲ್ಲು ಬಂಡೆಗಳ ಪ್ರದೇಶವಾಗಿರುವುದರಿಂದ ನೀರು ಸಿಗುವುದು ಕಷ್ಟ, ಸಿಕ್ಕರೂ ದೊರೆಯುವ ನೀರಿನ ಪ್ರಮಾಣ ಅತ್ಯಲ್ಪವಾಗಿರುತ್ತದೆ ಎಂದು ಹೇಳಿ ಪಶ್ಚಿಮ ಭಾಗದಲ್ಲಿ ಒಂದು ತಗ್ಗಾದ ಪ್ರದೇಶದಲ್ಲಿ ಒಂದು ಸ್ಥಳವನ್ನು ತೋರಿಸಿದ. ಆ ಜಾಗ ಮೇಲುಕೋಟೆಯಿಂದ ಸುಮಾರು ೯೦ ಅಡಿ ಕೆಳಗಿರುವ ಪ್ರದೇಶ. ಪಕ್ಕದಲ್ಲಿ ಮಳೆಗಾಲದಲ್ಲಿ ಒಂದು ತೊರೆ ಹರಿಯುತ್ತದೆ. ಸರಿ ಅವನಿಂದ ಒಂದು ವರದಿ ಪಡೆದು ಬಾವಿಯನ್ನು ತೋಡುವ ಕೆಲಸವನ್ನು ಪ್ರಾರಂಭಿಸಲಾಯಿತು. ಅಕ್ಕ ಪಕ್ಕದ ಹಳ್ಳಿಯ ಕೆಲಜನರನ್ನು ಕೂಲಿಗೆ ಗೊತ್ತು ಮಾಡಿ ಕೆಲಸವನ್ನು ಪ್ರಾರಂಭಿಸಲಾಯಿತು. ಕೆಲಸದ ಮೇಲ್ವಿಚಾರಣೆಗಾಗಿ ದಿನಾಲು ಹೊಸ ಜೀವನ ದಾರಿಯಿಂದ ಮೇಲುಕೋಟೆಗೂ ಮೇಲುಕೋಟೆಯಿಂದ ಹೊಸ ಜೀವನ ದಾರಿಗೂ ಮೆಟ್ಟಿಲುಗಳನ್ನು ಹತ್ತಿ, ಮೆಟ್ಟಿಲುಗಳನ್ನು ಇಳಿದು ಓಡಾಡಬೇಕಾಗುತ್ತಿತ್ತು. ಆ ಮೆಟ್ಟಿಲುಗಳೋ ಹತ್ತುವುದಕ್ಕಿಂತ ಕೆಳಗೆ ಬೀಳಲು ಸಹಾಯಕವಾಗಿದ್ದವು. ಮೇಲುಕೋಟೆ ದನಗಳೂ ಸಹ ಕೆಳಗಿಳಿದು ಬರಲು ಆ ಮೆಟ್ಟಿಲುಗಳನ್ನೇ ಉಪಯೋಗಿಸುತ್ತಿದ್ದವು. ಅವು ಇಳಿಯುವಾಗ ಹತ್ತುವಾಗ ಮೆಟ್ಟಿಲುಗಳ ಮೇಲೆ ಅಲ್ಲಲ್ಲಿ ಸಗಣಿ ಹಾಕಿರುತ್ತಿದ್ದವು. ಅವುಗಳ ಮೇಲೆ ಕಾಲಿಟ್ಟರೆ ಜಾರುವ ಸಂಭವ. ಆದ್ದರಿಂದ ಅವುಗಳನ್ನು ದಾಟಿ ದಾಟಿ ಬಹು ಎಚ್ಚರಿಕೆಯಿಂದ ಇಳಿಯಬೇಕಾಗುತ್ತಿತ್ತು, ಹತ್ತಬೇಕಾಗುತ್ತಿತ್ತು. ನೂರಾರು ವರ್ಷಗಳಿಂದ ಆ ಮೆಟ್ಟಿಲುಗಳು ಉಪಯೋಗವಾಗಿದ್ದರಿಂದ ಅವು ಸವೆದು ಹೋಗಿದ್ದವು. ಕೆಲವು ಮೆಟ್ಟಿಲುಗಳು ಕೆಳಮುಖವಾಗಿಯೇ ಹೆಚ್ಚು ವಾಲಿದ್ದವು. ಮೆಟ್ಟಿಲುಗಳ ಈ ಕಾಲ್ದಾರಿಯ ಒಂದೆರಡು ಮಾರುಗಳಲ್ಲಿಯೇ ಎಡ ಮತ್ತು ಬಲ ಪಕ್ಕ ದಟ್ಟವಾಗಿ ರೋಜಾ ಮೆಳೆ ಬೆಳೆದ್ದಿದ್ದವು. ಕೆಲವೊಂದು ಸಲ ಆ ಮೆಳೆಗಳ ಉದ್ದನೆಯ ಮುಳ್ಳುಸಹಿತವಾದ ರೆಂಬೆಗಳು ಮುಖಕ್ಕೆ ಬಡಿಯುತ್ತಿದ್ದವು. ಆಗಾಗ್ಗೆ ಅದೇ ದಾರಿಯಲ್ಲಿ ಹೋಗುವವರ ಎದುರು-ಬದಿರು ಭೇಟಿಯಾಗುತ್ತಿತ್ತು. ಇಂಥ ಕಡಿದಾದ ಮೆಟ್ಟಿಲುಗಳ ವಕ್ರ ವಕ್ರವಾದ

ದಾರಿಯಿಳಿದು ಬಂದ ಮೇಲೆ ಹೊಸ ಜೀವನ ದಾರಿಯ ಕಡೆಗೆ ಹೋಗುವ ಕೆಮ್ಮಣ್ಣಿನ ಅಗಲವಾದ ರಸ್ತೆ ಸಿಗುತ್ತಿತ್ತು. ಈ ರಸ್ತೆ ಮೇಲುಕೋಟೆ-ಚಿನಕುರುಳಿ ಸೇರಿಸುವ ಹತ್ತೊಂಭತ್ತು ಮೈಲಿಗಳ ರಸ್ತೆಯಾಗಿತ್ತು. ಈ ರಸ್ತೆಯ ಮೇಲೆ ಯಾವುದೇ ವಾಹನಗಳ ಸಂಚಾರ ಇರಲಿಲ್ಲ. ಕುರಿಕಾಯುವವರು, ದನಕಾಯುವವರು, ಮೇಲುಕೋಟೆಗೆ ಹೋಗಿ ಮೊಸರು-ಸೌದೆ ಮಾರುವವರು ಓಡಾಡುತ್ತಿದ್ದರು. ದಿನಾಲೂ ಈ ರಸ್ತೆಯಲ್ಲಿಯೇ ಓಡಾಡುತ್ತಿದ್ದುದರಿಂದ ಹಲವರ ಪರಿಚಯವಾಗುತ್ತಿತ್ತು ಮತ್ತು ಅವರೊಂದಿಗೆ ಮಾತನಾಡುತ್ತಾ ಹೋಗುತ್ತಿದ್ದುದರಿಂದ ನಡಿಗೆಯ ಆಯಾಸ ಕಡಿಮೆ ಅನ್ನಿಸುತ್ತಿತ್ತು. ಹಲವಾರು ತಿಂಗಳುಗಳ ಪರಿಶ್ರಮದಿಂದ ಸುಮಾರು ಮೂವತ್ತು ಅಡಿ ಸುತ್ತಳತೆ ಹತ್ತು-ಹದಿನೈದು ಅಡಿ ಬಾವಿಯೆಂಬ ಹೆಸರಿನ ಗುಂಡಿಯನ್ನು ತೋಡಲಾಯಿತು. ಮುಂದೆ ಬಾವಿ ತೋಡುವ ಕೆಲಸ ಕಷ್ಟವಾಗತೊಡಗಿತು. ಏಕೆಂದರೆ ತಳದಲ್ಲಿ ಒಂದು ದೊಡ್ಡ ಬಂಡೆ ಸಿಕ್ಕಿಬಿಟ್ಟಿತು. ಆ ಬಂಡೆ ಗಟ್ಟಿ ಕಲ್ಲಿನದಾಗಿರಲಿಲ್ಲ. ಹಾರೆಯಿಂದ ಹೊಡೆದಾಗ ಪುಡಿಯಾಗುತ್ತಿತ್ತು. ಆ ಗುಂಡಿಯ ಒಂದು ಮೂಲೆಯಲ್ಲಿ ನೀರಿನ ಒಂದು ಕಣ್ಣು ಸಿಕ್ಕಿತು. ಆಗ ಸುತ್ತಲಿನ ಹಿಟ್ಟುಕಲ್ಲನ್ನು ಸಿಡಿ ಮದ್ದುಯಿಟ್ಟು ಕ್ರಮೇಣ ತೆಗೆಯಬೇಕೆಂಬ ಸಲಹೆ ಬಂದಿತು. ಈ ವಿಷಯವಾಗಿ ಮಾರ್ಗದರ್ಶನ ಪಡೆಯಲು ಪುನಃ ಮಂಡ್ಯಕ್ಕೆ ಧಾವಿಸಬೇಕಾಯಿತು. ಆ ಜಲಶೋಧಕನ ಸಲಹೆಯ ಪ್ರಕಾರ ಇನ್ನಷ್ಟು ಆಳ ತೋಡಬೇಕೆಂದು ತೀರ್ಮಾನಿಸಿ ಹಿಟ್ಟುಕಲ್ಲಿನ ಬಂಡೆಯನ್ನು ಮದ್ದು ಇಟ್ಟು ಒಡೆಯುವ ಕೆಲಸ ಪ್ರಾರಂಭವಾಯಿತು. ಇದು ಯಾವುದೂ ಸುಲಭ ಇರಲಿಲ್ಲ. ಎಲ್ಲ ಪದಾರ್ಥಗಳಿಗೆ ಮೈಸೂರಿಗೆ ಹೋಗಿ ದಾಸಪ್ರಕಾಶ ಹೋಟೆಲ್ ಪಕ್ಕದಲ್ಲಿ ಗಲ್ಲಿ-ಗಲ್ಲಿ ಸುತ್ತಾಡಿ ಮದ್ದು ಮತ್ತು ಇತರ ಪರಿಕರಗಳನ್ನು ಖರೀದಿಸಿ ತರಲಾಯಿತು. ಆಗ ಇನ್ನೊಂದು ತೊಡಕು ಉಂಟಾಯಿತು. ಮದ್ದು-ಬತ್ತಿ ಇತ್ಯಾದಿಗಳನ್ನು ಖರೀದಿಸಬೇಕಾದರೆ ಅಂಗಡಿಯವನು ಜಿಲ್ಲಾಧಿಕಾರಿಗಳಿಂದ ಅನುಮತಿ ಪತ್ರ ತೋರಿಸಬೇಕೆಂದು ಹೇಳಿದ. ಆಗ ನಾನು ಅವನಿಗೆ ನನ್ನ ಎಲ್ಲ ಪ್ರಾಮಾಣಿಕತೆಯನ್ನು ಆಂಜನೇಯ ತನ್ನ ಎದೆಯನ್ನು ಸೀಳಿ ರಾಮನ ಮೇಲಿನ ತನ್ನ ಭಕ್ತಿಯನ್ನು ತೋರಿಸುವಂತೆ ನನ್ನ ಪ್ರಾಮಾಣಿಕತೆಯನ್ನು ಹಾಗೂ ಸಂಸ್ಥೆಯ ಪರಿಚಯವನ್ನು ಮನಮುಟ್ಟುವಂತೆ ಮದ್ದು-ಬತ್ತಿ ಮಾರುವವನಿಗೆ ಹೇಳಬೇಕಾಯಿತು. ಕೊನೆಗೂ ಅವೆಲ್ಲವನ್ನೂ ಪಡೆದು ಬಾವಿಯ ಆಳ ಇಳಿಸುವ ಕೆಲಸವನ್ನು ಯಥಾರೀತಿ ಪ್ರಾರಂಭಿಸಲಾಯಿತು. ಬಾವಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನೀರು ಬರುವುದಿರಲಿ ದುರಾದೃಷ್ಟಕ್ಕೆ ಆ ಹಿಟ್ಟುಕಲ್ಲನ್ನು ಸಿಡಿಮದ್ದಿನಿಂದ ಒಡೆದಾಗ ಕಟ್ಟಡ ನಿರ್ಮಾಣಕ್ಕೆ ಉಪಯೋಗವಾಗುವ ಸೈಜು ಕಲ್ಲು ರೀತಿಯ ಕಲ್ಲುಗಳೇ ದೊರೆಯಲಿಲ್ಲ. ಆ ರೀತಿಯ ಕಲ್ಲುಗಳು ದೊರೆತಿದ್ದರೆ ಬಾವಿ ತೋಡಿದ ಖರ್ಚಿನಲ್ಲಿ ಸ್ವಲ್ಪ ಭಾಗವಾದರೂ ಕೂಡಿ ಬರುತ್ತಿತ್ತು.

ಆದರೆ ಸಿಕ್ಕಿದ್ದೆಲ್ಲಾ ಗಟ್ಟಿಯಿಲ್ಲದ ಅಡ್ಡಾದಿಡ್ಡಿ ಆಕಾರದ ನಿಷ್ಪ್ರಯೋಜಕ ಕಲ್ಲುಗಳು. ಬಾವಿಯ ಹೊರಭಾಗದಲ್ಲಿ ಈ ಹಿಟ್ಟುಕಲ್ಲಿನ ಹಾಗೂ ಪುಡಿಕಲ್ಲು ಮಿಶ್ರಿತಗೊಂಡ ಮಣ್ಣಿನ ರಾಶಿಯೇ ಬಿತ್ತು. ಆದರೆ ನೀರಿನ ಪ್ರಮಾಣ ಮಾತ್ರ ಹೆಚ್ಚಾಗಲಿಲ್ಲ. ಬಾವಿ ತೋಡುವಾಗ ಮನಸ್ಸಿನಲ್ಲಿದ್ದ ಕಲ್ಪನೆಗೂ, ಈಗ ಕಣ್ಣಮುಂದೆ ಇದ್ದ ಪ್ರತ್ಯಕ್ಷವಾಗಿ ಕಾಣುತ್ತಿದ್ದ ಗುಂಡಿಯಾಕಾರದ ಬಾವಿಗೂ ಯಾವ ಸಂಬಂಧವೂ ಇರಲಿಲ್ಲ. ಒಂದು ಸುಂದರ ವರ್ತುಲಾಕಾರದ ಸ್ವಚ್ಛ ನೀರಿನ, ಸುತ್ತಲೂ ಗಟ್ಟಿಯಾಗಿ ಕಟ್ಟಿದ ಕಲ್ಲುಗಳ ಗೋಡೆಯ ಬಾವಿಯ ಚಿತ್ರ ಮನಸ್ಸಿನಲ್ಲಿ ಇತ್ತು. ಆದರೆ ಈಗ ಆದದ್ದು ಕಷ್ಟಪಟ್ಟು ಇಳಿದು ಬಗ್ಗಿ ಬೊಗಸೆಯಲ್ಲಿ ಎತ್ತಿಕೊಂಡು ಕುಡಿಯಬಹುದಾದ ನೀರಿರುವ ಸ್ಥಳದಂತಾಯಿತು. ಮನೆಕಟ್ಟಿ ನೋಡು, ಮದುವೆ ಮಾಡಿ ನೋಡು ಎಂಬ ಗಾದೆ ಮಾತಿನ ಜೊತೆಗೆ ಬಾವಿ ತೋಡಿಸಿ ನೋಡು ಎಂಬ ಮಾತನ್ನು ಸೇರಿಸಬೇಕೆಂದೆನಿಸಿತು.

(ಮುಂದುವರೆಯುವುದು)

ಜನಪದ ಧ್ವನಿ

ಜನಪದ ಧ್ವನಿ ಎಂಬ ಶೀರ್ಷಿಕೆಯಡಿಯಲ್ಲಿ ಆರ್ಥಿಕ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಪ್ರಚಲಿತ ವಿದ್ಯಮಾನಗಳ ಬಗ್ಗೆ ನಿಮ್ಮ ಅನಿಸಿಕೆ ಅಥವಾ ಪ್ರತಿಕ್ರಿಯೆಗಳನ್ನು ೧೫ ವಾಕ್ಯಗಳಿಗೆ ಸೀಮಿತಗೊಳಿಸಿ ಬರೆದು ಕಳುಹಿಸಿದಲ್ಲಿ ಅದನ್ನು ಪ್ರಕಟಿಸಲಾಗುವುದು.

ಸನ್ಮಾನ್ಯರಿಂದ

೨೦೦೭ ಮಾರ್ಚ್ ತಿಂಗಳ ಜನಪದ ವಿಚಾರ ಬಂದಿತು. ಅದರಲ್ಲಿ ಶ್ರೀ ವಿನೋಬಾರ 'ವೇದದ ದೃಷ್ಟಿಯಲ್ಲಿ ಭಗವಂತನ ಉಪಾಸನೆ' ಲೇಖನ ನನಗೆ ತುಂಬಾ ಮೆಚ್ಚುಗೆಯಾಯಿತು. ವೇದವನ್ನೋದಲಾರದ ನನ್ನಂಥವರಿಗೆ ಸಾಗರದಾಳಕ್ಕೆ ಇಳಿದು ಆಣಿಮುತ್ತುಗಳನ್ನು ತರಲು ಸಾಧ್ಯವೇ! ಪೂಜ್ಯರು, ಆ ಕೆಲಸ ಮಾಡಿದ್ದಾರೆ.

ನಿಮ್ಮ 'ಕಾವೇರಿಯ ಸುಳಿಯಲ್ಲಿ' ಸಹ ಕರ್ನಾಟಕ ಜನತೆಯನ್ನು ಬಡಿದೆಬ್ಬಿಸುವಂತಿದೆ. ಕಾವು+ಏರಿ = ಕಾವೇರಿಯಾಗಬೇಕಾಗಿದೆ. ಆದರೆ ಕರ್ನಾಟಕದಲ್ಲಿ ಸ್ವಾಭಿಮಾನದ ಕಾವೇ ಇಲ್ಲವಲ್ಲ!

ಪ್ರೊ. ನಿಸಾರ್ ಅಹಮದ್‌ರ ಚಿಂತನವೂ ಮನನೀಯ. ಅವರು ಭಾವೈಕ್ಯದ ಸಂಕೇತವೇ ಆಗಿದ್ದಾರೆ.

ಈ ಸಂಚಿಕೆಯಿಂದ ನಾನು ಹೊಸದಾಗಿ ತಿಳಿದುಕೊಂಡದ್ದೆಂದರೆ, "ಪತ್ರಕರ್ತ ಸಾಯಿನಾಥರ ಅಮೋಘ ವ್ಯಕ್ತಿತ್ವ! ಹಳ್ಳಿಗಳ ಮೇಲೆ ಬೆಳಕು ಚೆಲ್ಲಿದ ಹೊಂಬೆಳಕು."

ಎರಡನೆಯುದು ನಿಮ್ಮ 'ಅವಾರ್ಡ್' ಪರಿಚಯು. ಅದು ನಿಶ್ಚೇತನಗೊಂಡುದಕ್ಕೆ ವ್ಯಥೆ. ಒಟ್ಟಾರೆ ಸಂಚಿಕೆ ವಿಚಾರವರ್ಧಕವೆನಿಸಿತು, ಧನ್ಯವಾದಗಳು.

–ಶಾರದಾ ಜಡೆ ಸಾಂಗ್ಲಿ (ಮಹಾರಾಷ್ಟ್ರ)

* * *

ಜನಪದ ವಿಚಾರದ ಎಲ್ಲ ಲೇಖನಗಳೂ ಆಯ್ದ ಆಣಿಮುತ್ತುಗಳಂತಿವೆ. ಸುರೇಂದ್ರ ಕೌಲಗಿಯವರ "ಇಂದಿನ ಮಹಿಳೆ....." ಸಮಾಜ ಮತ್ತು ಮಹಿಳೆಯಲ್ಲಿ ಸುನಾಮಿ ಅಲೆಯನ್ನೇ ಎಬ್ಬಿಸಿದೆ. ಚಿಂತನೆಗೆ ಎಡೆ ಮಾಡಿದೆ. ನಾವು ಎಚ್ಚೆತ್ತುಕೊಳ್ಳಬೇಕಿದೆ. ಮಹಾಶ್ವೇತಾದೇವಿಯವರ ಲೇಖನದ ಅನುವಾದ ಮೂಲಕೃತಿಯಂತೆಯೇ ಕೌತುಕವಾಗಿ ಓದಿಸಿಕೊಂಡು ಹೋಗುತ್ತದೆ.

– ವೈದೇಹಿ, ಮೈಸೂರು

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸದ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಅದರಲ್ಲಿಯೂ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ 15 ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

–ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

(–ಸಂಪಾದಕರು)

ತೆರೆದ-ಅಂಚೆ

KA / SK / MND / 470 / 2006-2008
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

jANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431.DTP Sanketh, Melkote. Printed at INDIVARA, Nagamangala
Phone : 08236 – 298754 e-mail : janapada@yahoo.com